ಸಂಪಾದಕರು: ರವಿಕುಮಾರ್ ಸಿ.ಹೆಚ್.

RNI: KARKAN/2021/80805

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

ಸೂರ್ಯ ಪ್ರಗತಿ

SURYA PRAGATHI Kannada daily

ಡಿಜಿಟಲ್ ನ್ಯೂಸ್ ಚಾನಲ್

ಪ್ರತಿ ಸುದ್ದಿಯ ಧ್ವನಿ

suryapragathidailynews@gmail.com 9901010109 L2/RNP-1285/TMR/2025-27

Volume:05 ಸಂಪುಟ: 05 | Issue:212 ಸಂಚಿಕೆ: 212 | Date:15-09-2026 Tuesday | RNI NO : KARKAN/2021/80805 | L2/RNP-1285/TMR/2025-27 | Page:4 ಪುಟ : 4 | Price: 1.00 ಬೆಲೆ: 1.00 ರೂ

ಸಣ್ ಸುದ್ದಿ



ನಾಡಿನೆಲ್ಲೆಡೆ ಸಡಗರ ಸಂಭ್ರಮದಿಂದ ಗೌರಿ-ಗಣೇಶ ಹಬ್ಬವನ್ನು ಆಚರಿಸಲಾಯಿತು. ಬರಗಾಲದ ನಡುವೆಯೂ ಜನರು ಗೌರಿಗೆ ಬಾಗಿನ ಅರ್ಪಿಸಿ ವಿಘ್ನ ನಿವಾರಕ ಗಣಪತಿಯನ್ನು ಪ್ರತಿಷ್ಠಾಪಿಸಿ ನಾಡಿಗೆ ಬಂದಿರುವ ಭೀಕರ ಬರಗಾಲದಿಂದ ನಾಡಿನ ಜನರನ್ನು ರಕ್ಷಿಸುವಂತೆ ಬೇಡಿಕೆಯಿಟ್ಟರು, ಗ್ರಾಮೀಣ ಭಾಗದಲ್ಲಿ ಮತ್ತು ನಗರ ಪ್ರದೇಶದಲ್ಲಿ ವಿಶೇಷ ವೇದಿಕೆ ಅಲಂಕರಿಸಿ ಗಣೇಶನನ್ನು ಪೂಜಿಸಿ ಕೆಲವು ಕಡೆಗಳಲ್ಲಿ ವಿಸರ್ಜಿಸಿದರು, ಆದರೆ ಗ್ರಾಮೀಣ ಭಾಗದಲ್ಲಿ ಕೆರೆ ಕಟ್ಟೆಗಳಲ್ಲಿ ನೀರು ಇಲ್ಲಾದಂತಾಗಿ ಗಣಪತಿ ವಿರ್ಸಜನೆಗೆ ಪರದಾಡುವಂತಾಗಿದೆ.

ದೊಡ್ಡ ದೊಡ್ಡ ಗಣಪತಿ ಕೂರಿಸಿ ಇರುವ ಜಲಮೂಲಗಳು ಹಾಳಗುವ ಆತಂಕ



ಕೊರಟಗೆರೆ: ಒಂದೆಡೆ ಮಳೆ ಕೈಕೊಟ್ಟಿದ್ದರೆ ಮತ್ತೊಂದೆಡೆ ಬಿಸಿಲಿನ ಧಗೆ. ಕೆರೆ-ಕುಂಟೆಗಳು ನೀರಿಲ್ಲದೆ ಬರಿದಾಗಿರುವ ನಡುವೆಯೇ ಗಣೇಶ ಚತುರ್ಥಿ ಎದುರಾಗಿದೆ. ಗಣೇಶನನ್ನು ಕೂರಿಸಲು ಉತ್ಸಾಹವಿದ್ದರೂ, ವಿಸರ್ಜನೆಗೆ ನೀರಿಲ್ಲದಿರುವುದು ಗಣೇಶೋತ್ಸವಕ್ಕೆ ಹೊಸ ಸವಾಲಾಗಿದೆ.ಮಕ್ಕಳು, ಯುವಕರಲ್ಲಿ ಗಣೇಶ ಕೂರಿಸುವ ಉತ್ಸಾಹ ಮುಂದುವರಿದಿದ್ದರೂ, ದೊಡ್ಡ ಗಾತ್ರದ ಮೂರ್ತಿಗಳನ್ನು ಪ್ರತಿಷ್ಠಾಪಿಸುವ ಸಾಹಸಕ್ಕೆ ಹಲವರು ಹಿಂದೇಟು ಹಾಕುತ್ತಿದ್ದಾರೆ. ಮೂರ್ತಿ ಕೂರಿಸಿದ ಬಳಿಕ ವಿಸರ್ಜನೆ ಎಲ್ಲಿ ಮಾಡುವುದು ಎಂಬ ಪ್ರಶ್ನೆಯೇ ಸಂಘಟಕರನ್ನು ಕಾಡುತ್ತಿದೆ.



'ಗಣೇಶ ಹಬ್ಬದ ಸಂಭ್ರಮ ಮುಗಿದ ಬಳಿಕ ಮೂರ್ತಿಗಳ ವಿಸರ್ಜನೆಯ ಪರಿಣಾಮವನ್ನು ನಾವು ಮರೆತುಬಿಡುತ್ತೇವೆ. ಆದರೆ ಜಲಮೂಲಗಳು ಮರೆಯುವುದಿಲ್ಲ. ಪಟ್ಟಣದ ಕೋಟೆ ವೆಂಕಟರಮಣ ಸ್ವಾಮಿ ದೇವಾಲಯದ ಬಳಿಯಿರುವ ಕಲ್ಯಾಣಿಯ ಇಂದಿನ ಸ್ಥಿತಿಯೇ ಅದಕ್ಕೆ ಸಾಕ್ಷಿ. ಭಕ್ತಿಯ ಆಚರಣೆ ಪರಿಸರಕ್ಕೆ ಹಾನಿಯಾಗದ ರೀತಿಯಲ್ಲಿ ನಡೆಯಬೇಕು. ಮಣ್ಣಿನ ಗಣಪತಿಯನ್ನು ಬಳಸಿ, ಕೃತಕ ಬಣ್ಣ ಮತ್ತು ಪಿಒಪಿ ಮೂರ್ತಿಗಳಿಗೆ ಕಡಿವಾಣ ಹಾಕಬೇಕು' ಎಂದು ರಮೇಶ್ ಹೇಳಿದರು.ಈ ವರ್ಷ ಮಳೆಯೇ ಇಲ್ಲದೆ ಕೆರೆ-ಕುಂಟೆಗಳು ಬರಿದಾಗಿವೆ. ಇಂತಹ ಸಂದರ್ಭದಲ್ಲಿ ದೊಡ್ಡ ದೊಡ್ಡ ಗಣಪತಿ ಕೂರಿಸಿ ವಿಸರ್ಜನೆಗೆ ನೀರಿಗಾಗಿ ಪರದಾಡುವ ಪರಿಸ್ಥಿತಿ ಬರಬಾರದು. ಸ್ಥಳೀಯ ಆಡಳಿತವೇ ಪರಿಸರ ಸ್ನೇಹಿ ವಿಸರ್ಜನೆಗೆ ಪರ್ಯಾಯ ವ್ಯವಸ್ಥೆ ಮಾಡಬೇಕು. ಹಬ್ಬದ ಹೆಸರಿನಲ್ಲಿ ಜಲಮೂಲಗಳನ್ನು ಮತ್ತಷ್ಟು ಹಾಳು ಮಾಡುವುದು ಸರಿಯಲ್ಲ' ಎನ್ನುತ್ತಾರೆ ಗೃಹಿಣಿ ಶೈಲಜಾ.ಸಣ್ಣ ಪುಟ್ಟ ಸಂಘಟನೆಗಳವರು ಗಣೇಶ ಕೂರಿಸುತ್ತೇವೆ, ಆರ್ಕೆಸ್ಟ್ರಾ ನಿಮ್ಮದೇ, ನಾಟಕ ನಿಮ್ಮದೇ ಎಂದು ಬರುತ್ತಾರೆ. ಯಾರಿಗೆ ಕೊಡಬೇಕು, ಯಾರನ್ನು ಬಿಡಬೇಕು ಎಂಬುದೇ ಗೊತ್ತಾಗುವುದಿಲ್ಲ. ಗಣೇಶೋತ್ಸವದ ಹೆಸರಿನಲ್ಲಿ ಬರುವ ಇಂತಹ ಬೇಡಿಕೆಗಳೇ ಕೆಲವೊಮ್ಮೆ ತಲೆನೋವಾಗುತ್ತವೆ ಎಂದು ಮುಖಂಡರೊಬ್ಬರು ಬೇಸರ ವ್ಯಕ್ತಪಡಿಸಿದರು.

ಗೌರಿ- ಗಣೇಶ ಹಬ್ಬದ ಸಂಭ್ರಮ; ಸ್ವಕ್ಷೇತ್ರದಲ್ಲಿ ಸಿಎಂ, ಡಿಕೆಶಿ ರೌಂಡ್ಸ್

ಸೂರ್ಯಪ್ರಗತಿನ್ಯೂಸ್.ಕಾಂ



ರಾಮನಗರ: ಎಲ್ಲೆಡೆ ಗೌರಿ- ಗಣೇಶ ಹಬ್ಬದ ಸಂಭ್ರಮ. ಹಬ್ಬದ ಸಂಭ್ರಮದ ನಡುವೆಯೂ ಸಿಎಂ ಡಿಕೆ ಶಿವಕುಮಾರ್ ಅವರು ಕ್ಷೇತ್ರ ಸಂಚಾರ ಮಾಡುವ ಮೂಲಕ ಜನರ ಸಮಸ್ಯೆ ಆಲಿಸಿದರು. ಸೋಮವಾರ ಸ್ವಕ್ಷೇತ್ರಕ್ಕೆ ತೆರಳಿದ ಡಿಕೆ ಶಿವಕುಮಾರ್ ಅವರು, ತಾಯಿ ಗೌರಮ್ಮ ಅವರನ್ನು ಭೇಟಿ ಮಾಡಿ ಹಬ್ಬದ ಶುಭಾಶಯಗಳನ್ನು ತಿಳಿಸಿದರು.

ಬಳಿಕ ದೊಡ್ಡಾಲಹಳ್ಳಿಗೆ ಕುಟುಂಬದ ಜೊತೆಗೆ ತೆರಳಿ ಹಿರಿಯರ ಸಮಾಧಿಗೆ ಪೂಜೆಯನ್ನು ಸಲ್ಲಿಸಿದರು. ಸ್ನೇಹಿತರು, ಹಿರಿಯರನ್ನು ಭೇಟಿ ಮಾಡಿದ ಸಿಎಂ ಸಿಎಂ ಡಿಕೆ ಶಿವಕುಮಾರ್ ಅವರು ಕ್ಷೇತ್ರದಲ್ಲಿ ಹಿರಿಯರು, ಸ್ನೇಹಿತರನ್ನು ಭೇಟಿ ಮಾಡಿ ಹಬ್ಬದ ಶುಭಾಶಯಗಳನ್ನು ತಿಳಿಸಿದರು. ಅಷ್ಟೇ ಅಲ್ಲದೆ, ಗಣಪತಿ ಪೆಂಡಾಲ್‌ಗಳಿಗೆ ತೆರಳಿ ಪೂಜೆಯನ್ನು ಸಲ್ಲಿಸಿದರು. ಕನಕಪುರ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿಯ ದರ್ಶನ ಪಡೆದು, ಪೂಜೆ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ಸಿಎಂ ಡಿಕೆಶಿ ಜೊತೆಗೆ ಸ್ಥಳೀಯರು ಮುಗಿಬಿದ್ದು, ಫೋಟೋ ತೆಗೆಸಿಕೊಂಡು ಸಂಭ್ರಮಿಸಿದರು.

ಕಾಮಗಾರಿ ಪರಿಶೀಲನೆ

ಇದೇ ಸಂದರ್ಭದಲ್ಲಿ ಸಿಎಂ ಡಿಕೆ ಶಿವಕುಮಾರ್ ಅವರು ಕ್ಷೇತ್ರದಲ್ಲಿ ಸಂಚಾರ ನಡೆಸಿ ಕಾಮಗಾರಿ ಪರಿಶೀಲನೆ ನಡೆಸಿದರು. ಹುಲಿಬೆಲೆ ಗ್ರಾಮದಲ್ಲಿ ನಡೆಯುತ್ತಿರುವ ರಸ್ತೆ ಹಾಗೂ ಚರಂಡಿ ಕಾಮಗಾರಿಗಳನ್ನು ಪರಿಶೀಲನೆ ನಡೆಸಿದರು.

ಅಲ್ಲದೆ, ಇದೇ ಸಂದರ್ಭದಲ್ಲಿ ಸ್ಥಳೀಯ ಮುಖಂಡರು ಹಾಗೂ ಗ್ರಾಮಸ್ಥರಿಂದ ನಡೆಯುತ್ತಿರುವ ಕಾಮಗಾರಿಯ ಬಗ್ಗೆ ಮಾಹಿತಿ ಪಡೆದುಕೊಂಡರು. ಗುಣಮಟ್ಟದಲ್ಲಿ ಯಾವುದೇ ರೀತಿಯಲ್ಲಿ ರಾಜಿಯಾಗದಂತೆ ಕೆಲಸ ಮುಗಿಸಬೇಕು ಎಂದು ಸೂಚನೆ ನೀಡಿದರು.

ಅಲ್ಲದೆ,ತಡಮಾಡದೆನಿಗದಿತಕಾಲಮಿತಿಯಲ್ಲಿಕೆಲಸ ಮುಗಿಸುವಂತೆ ಅಧಿಕಾರಿಗಳು ನೋಡಿಕೊಳ್ಳಬೇಕು ಎಂದು ಸೂಚಿಸಿದರು. ಕನಕಪುರ ತಾಲೂಕಿನ ಸಾತನೂರು ಹೋಬಳಿಯ ಕೆಮ್ಮಾಳೆ ಗ್ರಾಮದಲ್ಲಿ ವಸತಿಹೀನರಿಗೆಂದು ನಿರ್ಮಿಸುತ್ತಿರುವ ನೂತನ ಬಡಾವಣೆ ಕಾಮಗಾರಿಯ ಪ್ರಗತಿಯನ್ನು ಸಿಎಂ ಡಿ ಕೆ ಶಿವಕುಮಾರ್ ಅವರು ಸೋಮವಾರ ಪರಿಶೀಲಿಸಿದರು. ಬಮೂಲ್ ಅಧ್ಯಕ್ಷ ಡಿ ಕೆ ಸುರೇಶ್, ಶ್ರೀಕಂಠು ಜತೆಗಿದ್ದರು.

ವಿದ್ಯಾರ್ಥಿಗಳ ಸಮಸ್ಯೆ ಆಲಿಸಿದ ಡಿಕೆಶಿ

ಕನಕಪುರ ಹಾಸ್ಟೆಲ್ ಗೆ ಸಿಎಂ ಡಿ ಕೆ ಶಿವಕುಮಾರ್ ದಿಢೀರ್ ಭೇಟಿ ನೀಡಿ, ವಿದ್ಯಾರ್ಥಿಗಳೊಂದಿಗೆ ಹಾಸ್ಟೆಲ್ ಊಟ ಸವಿದರು. ವಿದ್ಯಾರ್ಥಿಗಳು ವ್ಯಕ್ತಪಡಿಸಿರುವ ಕುಂದು ಕೊರತೆಗಳನ್ನು ಉಪ ಆಯುಕ್ತರು, ಸಿಇಒಗಳಿಗೆ ಕಳಿಸಿ ಮರು ಪರಿಶೀಲನೆ ಮಾಡಿಸಿ ಸರಿಪಡಿಸಲಾಗುವುದು ಎಂದು ಸಿಎಂ ಡಿ ಕೆ ಶಿವಕುಮಾರ್ ಅವರು ಭರವಸೆ ನೀಡಿದರು.

ಸಿಎಂ ಡಿ ಕೆ ಶಿವಕುಮಾರ್ ಅವರು ಕನಕಪುರ ನಗರದ ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಕಾಲೇಜಿನ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ದಿಢೀರ್ ಭೇಟಿ ನೀಡಿ, ವಿದ್ಯಾರ್ಥಿಗಳೊಂದಿಗೆ ಊಟ ಮಾಡಿ, ಅವರ ಕುಂದುಕೊರತೆ ಆಲಿಸಿದರು. ಇಲ್ಲಿನ ಕೊಠಡಿ, ಶೌಚಾಲಯಗಳನ್ನು ಪರಿಶೀಲಿಸಿದ್ದೇನೆ. ಇವರಿಗೆ ಬೆಡ್ ಶೀಟ್ ಇಲ್ಲ ಎಂಬುದನ್ನು ಗಮನಿಸಿರುವೆ. ಅವರ ಸಮಸ್ಯೆಗಳೇನು ಎಂದು ಅವರಿಂದಲೇ ಬರೆಸಿದ್ದೇನೆ ಎಂದರು. ಈ ವಿದ್ಯಾರ್ಥಿಗಳು ಉಚಿತ ಬಸ್ ಪಾಸ್ ಪಡೆದಿದ್ದಾರೆ. ಕಲಬುರ್ಗಿ, ರಾಯಚೂರು, ಬೀದರ್, ಹಾವೇರಿ, ಬೆಂಗಳೂರು, ಬಳ್ಳಾರಿ ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಈ ವಿದ್ಯಾರ್ಥಿಗಳ ಅಭಿಪ್ರಾಯ ಕೇಳಿದ್ದೇನೆ ಎಂದು ಹೇಳಿದರು.

ಸಬ್ ಜೂನಿಯರ್ ಬಾಲಕರ ಮತ್ತು ಬಾಲಕಿಯರ ಬಾಲ್ ಬ್ಯಾಡ್ಮಿಂಟನ್



ಮಧುಗಿರಿ:- ಮಧುಗಿರಿ ಸ್ಪೋರ್ಟ್ ಕ್ಲಬ್ ರಿ.ಮತ್ತು ಬಾಲ್ ಬ್ಯಾಡ್ಮಿಂಟನ್ ಅಸೋಸಿಯೇಷನ್ ಆಫ್ ಕರ್ನಾಟಕ ಇವರ ಸಹಯೋಗದೊಂದಿಗೆ ಸೆಪ್ಟೆಂಬರ್ 19 ಮತ್ತು 20 ರಂದು ಪಟ್ಟಣದ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ರಾಜ್ಯಮಟ್ಟದ 14 ವರ್ಷದೊಳಗಿನ ಸಬ್ ಜೂನಿಯರ್ ಬಾಲಕರ ಮತ್ತು ಬಾಲಕಿಯರ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ ಎಂದು ಪದಾಧಿಕಾರಿಗಳು ಹಾಗೂ ಸದಸ್ಯರುಗಳು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿರುತ್ತಾರೆ.

ಹಣ ವಸೂಲಿ,ಹಳೆ ದ್ವೇಷಕ್ಕೆ ಸ್ಥಳೀಯ ಕಿಡಿಗೇಡಿಗಳು ನಕ್ಸಲ್ ಹೆಸರು ಬಳಸಿ ಪತ್ರ ಹಾಕಿರಬಹುದು ಪೊಲೀಸರ ಶಂಕೆ: ಕನಿಕಲಬಂಡೆ ಸುತ್ತಮುತ್ತ ಕೂಂಬಿಂಗ್! ಬೆದರಿಕೆ ಪತ್ರ ಹಿನ್ನೆಲೆ ಪೊಲೀಸ್ ಅಲರ್ಟ್

ಸೂರ್ಯಪ್ರಗತಿನ್ಯೂಸ್.ಕಾಂ



ಪಾವಗಡ: ತಾಲ್ಲೂಕಿನ ಗಂಗಸಾಗರ ಗ್ರಾಮದ ಹೊರವಲಯದಲ್ಲಿ ನಕ್ಸಲ್ ಹೆಸರಿನಲ್ಲಿ 5 ಲಕ್ಷಕ್ಕೆ ಬೇಡಿಕೆ ಇಟ್ಟು ಬೆದರಿಕೆ ಪತ್ರ ಪತ್ತೆಯಾದ ಹಿನ್ನೆಲೆಯಲ್ಲಿ ಪೊಲೀಸರು ಹೈ ಅಲರ್ಟ್ ಆಗಿದ್ದಾರೆ.ನಕ್ಸಲ್ ಎನ್ನಲಾದ ಕನಿಕಲಬಂಡೆ ಉಪ್ಪಾರ ವೆಂಕಟೇಶ್ ಪತ್ತೆಗಾಗಿ ಪಾವಗಡ ಪೊಲೀಸರು ಬೃಹತ್ ಕೂಂಬಿಂಗ್ ಕಾರ್ಯಾಚರಣೆ ನಡೆಸಿದ್ದಾರೆ.

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಗೋಪಾಲ್ ಹಾಗೂ ಮಧುಗಿರಿ ಡಿವೈಎಸ್ಪಿ ಮಂಜುನಾಥ್ ನೇತೃತ್ವದಲ್ಲಿ ತುಮಕೂರು ಮತ್ತು ಪಾವಗಡದ ಸುಮಾರು 200 ಪೊಲೀಸರ 12 ತಂಡಗಳಿಂದ ಈ ಕಾರ್ಯಾಚರಣೆ ನಡೆದಿದೆ.

ಭಾನುವಾರ ಮುಂಜಾನೆ 6 ಗಂಟೆಯಿಂದ ಕನಿಕಲಬಂಡೆ, ಗಂಗಸಾಗರ, ವೀರಮ್ಮನಹಳ್ಳಿ, ಕೆಂಚಗಾನಹಳ್ಳಿ, ಪಳವಳ್ಳಿ, ಕೋಮಾರ್ಲಹಳ್ಳಿ, ಅರಕ್ಯಾತನ ಹಳ್ಳಿ, ಬಿ.ಅಚ್ಚಮ್ಮನಹಳ್ಳಿ ಹಾಗೂ ಬೊಮ್ಮನಹಳ್ಳಿ ಗ್ರಾಮಗಳ ಬೆಟ್ಟ-ಗುಡ್ಡ, ತೋಟಗಳಲ್ಲಿ ಡ್ರೋನ್, ಶ್ವಾನದಳ, ಶಸ್ತ್ರಸಜ್ಜಿತ ಪಡೆ, ನಕ್ಸಲ್ ನಿಗ್ರಹ ದಳ, ಟೆಕ್ನಿಕಲ್ ಟೀಂ ಮತ್ತು ಇಂಟೆಲಿಜೆನ್ಸ್ ತಂಡಗಳಿಂದ ಶೋಧ ನಡೆಸಲಾಯಿತು.

ಘಟನೆ ಹಿನ್ನೆಲೆ: ಗಂಗಸಾಗರ ಗ್ರಾಮದ ಮುತ್ತಕುಂಟ್ಲ ನಾಗಭೂಷಣ ಅವರಿಗೆ ಸಿಪಿಐ, ಸಿಪಿಎಂ, ಪೀಪಲ್ಸ್ ವಾರ್, ಜನಶಕ್ತಿ ಪಾರ್ಟಿ, ದೇವಣ್ಣ ದಳಂ ಹೆಸರಿನಲ್ಲಿ ಬೆದರಿಕೆ ಪತ್ರ ಬಂದಿತ್ತು. ಈ ಸಂಬಂಧ ಪಾವಗಡ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.**ಪೊಲೀಸರ ಶಂಕೆ:** ಕಳೆದ ಎರಡು ದಶಕಗಳಿಂದ ಪಾವಗಡ ತಾಲ್ಲೂಕಿನಲ್ಲಿ ನಕ್ಸಲ್ ಚಟುವಟಿಕೆ ಸಂಪೂರ್ಣ ನಿಂತುಹೋಗಿದೆ. ಹೀಗಾಗಿ ಹಣ ವಸೂಲಿ ಅಥವಾ ಹಳೇ ದ್ವೇಷಕ್ಕೆ ಸ್ಥಳೀಯ ಕಿಡಿಗೇಡಿಗಳೇ ನಕ್ಸಲ್ ಹೆಸರು ಬಳಸಿ ಪತ್ರ ಹಾಕಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಮತ್ತೊಂದು ಮಾಹಿತಿ ಪ್ರಕಾರ, 2021ರಲ್ಲಿ ಪತ್ನಿಯ ತವರು ಮನೆ ಜಮೀನು ವಿಚಾರವಾಗಿ ನಾಗಭೂಷಣ ಮತ್ತು ವೆಂಕಟೇಶ್ ನಡುವೆ ಜಗಳವಾಗಿತ್ತು. ಸದ್ಯ ವೆಂಕಟೇಶ್ ಪತ್ನಿ ಮತ್ತು ಮಗಳು ನಾಟಿ ಬಾಂಬ್ ಸ್ಫೋಟ ಪ್ರಕರಣದಲ್ಲಿ ಬಂಧಿತರಾಗಿದ್ದು, ಜಾಮೀನಿಗಾಗಿ ಹಣಕ್ಕಾಗಿ ವೆಂಕಟೇಶ್ ನೇ ಈ ರೀತಿ ಪತ್ರ ಬರೆದಿರಬಹುದು ಎಂಬ ಮಾತುಗಳು ಕೇಳಿ ಬರುತ್ತಿವೆ.ಕನಿಕಲಬಂಡೆ ಮತ್ತು ಗಂಗಸಾಗರ ಗ್ರಾಮಗಳಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದ್ದು, ಸಾರ್ವಜನಿಕರು ಆತಂಕ ಪಡಬೇಡಿ ಎಂದು ಪೊಲೀಸರು ಧೈರ್ಯ ತುಂಬಿದ್ದಾರೆ.

ಹಳೆ ಪ್ರಕರಣಗಳು: ವೆಂಕಟೇಶ್ ವಿರುದ್ಧ ಪಾವಗಡದಲ್ಲಿ 2001, 2004ರಲ್ಲಿ ಗಲಾಟೆ, 2004ರಲ್ಲಿ ಕಳ್ಳತನ, ಅರಸೀಕೆರೆ 2010 ರಾಬರಿ, ವೈ.ಎನ್.ಹೊಸಕೋಟೆ 2013 ರಾಬರಿ, ಆಂಧ್ರದ ಕಂಬದೂರು 2007ರಲ್ಲಿ ಪೊಲೀಸರ ಮೇಲೆ ಹಲ್ಲೆ, 2019ರಲ್ಲಿ ಬಾಂಬ್ ಸ್ಫೋಟಿಸಿ ವ್ಯಕ್ತಿ ಸಾವು ಪ್ರಕರಣ ಸೇರಿದಂತೆ ಹಲವು ಪ್ರಕರಣಗಳಿವೆ. 2026ರಲ್ಲಿ ಜಾತಿ ನಿಂದನೆ ಮತ್ತು ಬೆದರಿಕೆ ಪತ್ರದ 4 ಪ್ರಕರಣಗಳು ದಾಖಲಾಗಿವೆ.

ತುಮಕೂರಲ್ಲಿ ಘೋರ ಘಟನೆ ನೇಣು ಬಿಗಿದುಕೊಂಡು ವಿದ್ಯಾರ್ಥಿನಿ ಆತ್ಮಹತ್ಯೆ



ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರಿನಲ್ಲಿ ಘೋರವಾದ ದುರಂತ ಒಂದು ಸಂಭವಿಸಿದ್ದು, ಮನೆಯಲ್ಲಿ ನೇಣು ಬಿಗಿದುಕೊಂಡು SSLC ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನ ಹುಚ್ಚನಹಳ್ಳಿ ಗ್ರಾಮದಲ್ಲಿ ಈ ಒಂದು ಘಟನೆ ನಡೆದಿದೆ. ಮನೆಯಲ್ಲಿ ನೇಣು ಬಿಗಿದುಕೊಂಡು ಎಸ್ ಎಸ್ ಎಲ್ ಸಿ ವಿದ್ಯಾರ್ಥಿನಿ ಮಾನ್ವಿತಾ ಆತ್ಮಹತ್ಯೆ ಮಾಡಿಕೊಂಡಿದ್ದು ನಿನ್ನೆ ಶಾಲೆಯಲ್ಲಿ ಪೋಷಕರ ಮೀಟಿಂಗ್ ಇದ್ದ ಕಾರಣ ತಾಯಿ ಶಾಲೆಗೆ ತೆರಳಿದ ವೇಳೆ ಮನ್ವಿತಾ ನೇಣಿಗೆ ಶರಣಾಗಿದ್ದಾಳೆ. ಬಾಲಕಿ ಆತ್ಮಹತ್ಯೆಗೆ ನಿಖರವಾದ ಕಾರಣ ತಿಳಿದು ಬಂದಿಲ್ಲ. ಘಟನೆ ಕುರಿತು ಪೊಲೀಸರು ಪ್ರಕರಣದ ದಾಖಲಿಸಿಕೊಂಡು ತನಿಖೆ ನಡೆಸಿದ್ದಾರೆ.

ಚಿರತೆ ಪ್ರತ್ಯಕ್ಷ ಗ್ರಾಮಸ್ಥರಲ್ಲಿ ಆತಂಕ



ಕೊಡಿಗೇನಹಳ್ಳಿ: ಹೋಬಳಿಯ ಬಡಿದೇನಹಳ್ಳಿಯಲ್ಲಿ ಚಿರತೆ ಪ್ರತ್ಯಕ್ಷವಾಗಿದ್ದು, ಸುತ್ತಮುತ್ತಲಿನ ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ. ಮೂರು ದಿನದಿಂದ ಗ್ರಾಮದ ಹೊರವಲಯದ ಜಮೀನುಗಳಲ್ಲಿ ಚಿರತೆ ಕಾಣಿಸಿಕೊಂಡಿದೆ. ವಕೀಲ ಆದಿನಾರಾಯಣಪ್ಪ ಅವರ ಜಮೀನಿನ ಪಂಪ್‌ಹೌಸ್ ಮೇಲೆ ಇದ್ದಾಗ ರೈತರೊಬ್ಬರು ಮೊಬೈಲ್‌ನಿಂದ ಫೋಟೊ ತೆಗೆದಿದ್ದಾರೆ. ಚಿರತೆಯ ಫೋಟೊ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ಹರಡಿದ್ದು, ಜಮೀನುಗಳಿಗೆ ನೀರು ಹಾಯಿಸುವುದಕ್ಕೆ ಹೋಗಲು ರೈತರು ಹಿಂದೇಟು ಹಾಕುತ್ತಿದ್ದಾರೆ. ವಿಷಯ ಗೊತ್ತಾಗಿದೆ. ಪರಿಶೀಲನೆ ನಂತರ ಬೋನು ಇಡಲಾಗುವುದು ಎಂದು ಮಧುಗಿರಿ ವಲಯ ಅರಣ್ಯಾಧಿಕಾರಿ ಎಚ್.ಎಂ.ಸುರೇಶ್ ತಿಳಿಸಿದ್ದಾರೆ.

ಅಂತರಸನಹಳ್ಳಿ ಬ್ರಿಡ್ಜ್ ಕೆಳಗಿನ ರಸ್ತೆ ದುರಸ್ತಿಗೆ ಸಿಪಿಎಂ ಆಗ್ರಹ



ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ನಗರ ಹೊರವಲಯದ ಅಂತರಸನಹಳ್ಳಿ ಕೆಳ ಸೇತುವೆ ಬಳಿ ರಸ್ತೆ ದುರಸ್ತಿಗೆ ಒತ್ತಾಯಿಸಿ ಭಾರತ ಕಮ್ಯುನಿಸ್ಟ್ ಪಕ್ಷದಿಂದ (ಸಿಪಿಎಂ) ಶನಿವಾರ ಸೇತುವೆ ಬಳಿ ರಸ್ತೆ ತಡೆದು ಪ್ರತಿಭಟನೆ ನಡೆಸಲಾಯಿತು.'ನಿತ್ಯ ನೂರಾರು ವಾಹನಗಳು ಸಂಚರಿಸುವ ರಸ್ತೆ ಅಧ್ವಾನವಾಗಿದೆ.

ಈ ಕುರಿತು ಹಲವು ಬಾರಿ ಮನವಿ ಮಾಡಿದರೂ ಅಧಿಕಾರಿಗಳು ಗಮನ ಹರಿಸುತ್ತಿಲ್ಲ' ಎಂದು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

ಈ ವೇಳೆ ಪೊಲೀಸರ ಜತೆಗೆ ಮಾತಿನ ಚಕಮಕಿ ನಡೆಯಿತು.

'ಅಂತರಸನಹಳ್ಳಿ, ಯಲ್ಲಾಪುರದ ವರೆಗಿನ ಸುತ್ತಮುತ್ತಲಿನ ಬಡಾವಣೆಗಳಲ್ಲಿ ರಸ್ತೆ, ಚರಂಡಿ, ಬೀದಿ ದೀಪ, ಅನೈರ್ಮಲ್ಯ ಸೇರಿ ಹತ್ತಾರು ಸಮಸ್ಯೆಗಳಿವೆ. ಪ್ರತಿಭಟನೆ ನಡೆಸಿದರೂ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಬಂದು ಮನವಿ ಸ್ವೀಕರಿಸುತ್ತಿಲ್ಲ' ಎಂದು ಸಿಪಿಎಂ ನಗರ ಸಮಿತಿ ಕಾರ್ಯದರ್ಶಿ ಎ.ಲೋಕೇಶ್ ಅಸಮಾಧಾನ ವ್ಯಕ್ತಪಡಿಸಿದರು.

ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ, 'ಅಂತರಸನಹಳ್ಳಿ ರಸ್ತೆಯುದ್ದಕ್ಕೂ ಗುಂಡಿ ಬಿದ್ದಿವೆ. ಇದರಿಂದ ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಅವೈಜ್ಞಾನಿಕ ಕಾಮಗಾರಿಯಿಂದ ಅಪಘಾತಗಳು ಹೆಚ್ಚುತ್ತಿವೆ. ಪ್ರಯಾಣಿಕರ ಅನುಕೂಲಕ್ಕಾಗಿ ಸೇತುವೆ ಬಳಿ ಶೌಚಾಲಯ ನಿರ್ಮಿಸಬೇಕು' ಎಂದು ಒತ್ತಾಯಿಸಿದರು.

'ಸೆ. 20ರ ಒಳಗೆ ಸಿಪಿಎಂ ಪದಾಧಿಕಾರಿಗಳ ಜತೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಮಹಾನಗರ ಪಾಲಿಕೆ, ಬೆಸ್ಕಾಂ, ಪೊಲೀಸರ ಜಂಟಿ ಸಭೆ ನಡೆಸಲಾಗುವುದು' ಎಂದು ಪಾಲಿಕೆಯ ಎಂಜಿನಿಯರ್‌ಗಳಾದ ಪ್ರವೀಣ್, ಕಿರಣ್ ಭರವಸೆ ನೀಡಿದರು.

ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಬಿ. ಉಮೇಶ್, ಪದಾಧಿಕಾರಿಗಳಾದ ರಂಗಧಾಮಯ್ಯ, ಎಸ್.ರಾಘವೇಂದ್ರ, ದಿಲೀಪ್ ಭಾಗವಹಿಸಿದ್ದರು.

ಮುಖ್ಯ ಶಿಕ್ಷಕಿ ಅಡುಗೆ ಸಿಬ್ಬಂದಿ ನಡುವೆ ಜಗಳ: ಪಾಪ.. ಶಾಲಾ ಮಕ್ಕಳು ಉಪವಾಸ

ಸೂರ್ಯಪ್ರಗತಿನ್ಯೂಸ್.ಕಾಂ



ಮಧುಗಿರಿ: ತಾಲ್ಲೂಕಿನ ಗುಂಡ್ಲಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯ ಶಿಕ್ಷಕಿ ಹಾಗೂ ಬಿಸಿಯೂಟದ ಅಡುಗೆ ಸಿಬ್ಬಂದಿ ನಡುವಿನ ವಾಗ್ವಾದದ ಹಿನ್ನೆಲೆಯಲ್ಲಿ ಶಾಲಾ ಮಕ್ಕಳಿಗೆ ಅಡುಗೆ ಮಾಡದೆ ಅಡುಗೆ ಸಿಬ್ಬಂದಿ ಮನೆಗೆ ತೆರಳಿದ ಘಟನೆ ನಡೆದಿದೆ.

ಶನಿವಾರ ಬೆಳಗ್ಗೆ ಶಾಲಾ ಮಕ್ಕಳಿಗೆ ಹಾಲು ವಿತರಿಸುವ ಸಂದರ್ಭದಲ್ಲಿ ಸಕ್ಕರೆ ನೀಡಿಲ್ಲ ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಮುಖ್ಯ ಶಿಕ್ಷಕಿ ಹಾಗೂ ಅಡುಗೆ ಸಿಬ್ಬಂದಿ ನಡುವೆ ಮಾತಿನ ಚಕಮಕಿ ನಡೆದಿದೆ ಎನ್ನಲಾಗಿದೆ. ಈ ವೇಳೆ ಮುಖ್ಯ ಶಿಕ್ಷಕಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದು ಅಡುಗೆ ಸಿಬ್ಬಂದಿ ಗ್ರಾಮಸ್ಥರ ಬಳಿ ದೂರಿದ್ದಾರೆ. ವಿಷಯ ತಿಳಿದು ಗ್ರಾಮಸ್ಥರು ಶಾಲೆಗೆ ತೆರಳಿ ಮುಖ್ಯ ಶಿಕ್ಷಕಿಯನ್ನು ಪ್ರಶ್ನಿಸಿದಾಗ, ಸಮರ್ಪಕವಾಗಿ ಸ್ಪಂದಿಸದೆ ಉಡಾಫೆಯಾಗಿ ಉತ್ತರಿಸಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಇದರಿಂದ ಗ್ರಾಮಸ್ಥರಲ್ಲಿ ಅಸಮಾಧಾನ ಉಂಟಾಗಿದೆ.

ಘಟನೆ ಕುರಿತು ಸಂಬಂಧಪಟ್ಟ ಅಕ್ಷರ ದಾಸೋಹ ಅಧಿಕಾರಿಗಳ ಗಮನಕ್ಕೆ ತಂದ ಬಳಿಕ ಅಧಿಕಾರಿಗಳು ಶಾಲೆಗೆ ಭೇಟಿ ನೀಡಿ, ಮುಖ್ಯ ಶಿಕ್ಷಕಿ ಹಾಗೂ ಅಡುಗೆ ಸಿಬ್ಬಂದಿಯಿಂದ ಘಟನೆಗೆ ಸಂಬಂಧಿಸಿದಂತೆ ಲಿಖಿತ ಹೇಳಿಕೆ ಪಡೆದುಕೊಂಡು ತೆರಳಿದ್ದಾರೆ.

ಮುಖ್ಯ ಶಿಕ್ಷಕಿಯ ವರ್ತನೆ ಹಾಗೂ ಶಾಲೆಯಲ್ಲಿನ ಆಡಳಿತಾತ್ಮಕ ಸಮಸ್ಯೆಗಳ ಬಗ್ಗೆ ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದ್ದು, ಮಕ್ಕಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಶಾಲೆಯಲ್ಲಿ ಶಿಸ್ತು ಹಾಗೂ ಬಿಸಿಯೂಟದ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಬೇಕು ಎಂದು ಆಗ್ರಹಿಸಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕ್ರಮ ಕೈಗೊಳ್ಳುತ್ತಾರೋ ಇಲ್ಲವೋ ? ಕಾದುನೋಡಬೇಕಾಗಿದೆ.

(NCPI) 20 ಸಂಸದರ ಪೈಕಿ 17 ಮಂದಿ ಶೀಘ್ರದಲ್ಲೇ ಭಾರತೀಯ ಜನತಾ ಪಕ್ಷಕ್ಕೆ

ನವದೆಹಲಿ: ನ್ಯಾಷನಲಿಸ್ಟ್ ಸಿಟಿಜನ್ಸ್ ಪಾರ್ಟಿ ಆಫ್ ಇಂಡಿಯಾದ (NCPI) 20 ಸಂಸದರ ಪೈಕಿ 17 ಮಂದಿ ಶೀಘ್ರದಲ್ಲೇ ಭಾರತೀಯ ಜನತಾ ಪಕ್ಷಕ್ಕೆ ಸೇರ್ಪಡೆಯಾಗಲಿದ್ದಾರೆ ಎಂದು ತೃಣಮೂಲ ಕಾಂಗ್ರೆಸ್‌ನ ಬಂಡಾಯ ನಾಯಕ ಜಗದೀಶ್ ಚಂದ್ರ ಬರ್ಮಾ ಬಸುನಿಯಾ ತಿಳಿಸಿದ್ದಾರೆ.

ಬಿಜೆಪಿಗೆ ಸೇರಲಿರುವ ಸಂಸದರು ಮತ್ತು ಕಾಲಮಿತಿ ಅಕ್ಟೋಬರ್‌ನಲ್ಲಿ ನಡೆಯಲಿರುವ ದುರ್ಗಾ ಪೂಜೆಯ ಮೊದಲು ಅಥವಾ ನಂತರ ಈ ರಾಜಕೀಯ ಬೆಳವಣಿಗೆ ನಡೆಯಲಿದೆ ಎಂದು ಬಸುನಿಯಾ ಮಾಹಿತಿ ನೀಡಿದ್ದಾರೆ. ಎನ್‌ಸಿಪಿಐ ಪಕ್ಷದ ಒಟ್ಟು ಬಲದ ಮೂರನೇ ಎರಡರಷ್ಟು ಭಾಗವನ್ನು ತಾನು ಪ್ರತಿನಿಧಿಸುತ್ತಿರುವುದರಿಂದ, ಪಕ್ಷಾಂತರ



ನಿಷೇಧ ಕಾಯ್ದೆಯಡಿ ಯಾವುದೇ ಅನರ್ಹತೆಗೆ ಗುರಿಯಾಗುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಒಟ್ಟು 17 ಸಂಸದರು ಒಟ್ಟಾಗಿ ಬಿಜೆಪಿಗೆ ಸೇರಲು ನಿರ್ಣಯಿಸಿದ್ದಾರೆ ಎಂದು ಅವರು ಪುನರುಚ್ಚರಿಸಿದ್ದಾರೆ. ಪಕ್ಷಾಂತರ ನಿಷೇಧ ಕಾಯ್ದೆ ಮತ್ತು ಎನ್‌ಡಿಎಗೆ ಬೆಂಬಲ ಜೂನ್ 14ರಂದು ಟಿಎಂಸಿಯ 20 ಬಂಡಾಯ ಸಂಸದರು ಎನ್‌ಸಿಪಿಐ ಪಕ್ಷದೊಂದಿಗೆ ವಿಲೀನಗೊಂಡು ಆಡಳಿತಾರೂಢ ಎನ್‌ಡಿಎ (ಓಆಂ) ಮೈತ್ರಿಕೂಟಕ್ಕೆ ಬೆಂಬಲ ವ್ಯಕ್ತಪಡಿಸಿದ್ದರು.

ಪಕ್ಷಾಂತರ ನಿಷೇಧ ಕಾಯ್ದೆಯಡಿ ಕಾನೂನು ರಕ್ಷಣೆ ಪಡೆಯಲು ಮೂರನೇ ಎರಡರಷ್ಟು ಬಹುಮತಕ್ಕೆ ಕನಿಷ್ಠ 14 ಸಂಸದರ ಅಗತ್ಯವಿರುತ್ತದೆ. ಈ ಪೈಕಿ 17 ಮಂದಿ ಬಿಜೆಪಿಗೆ ಅಧಿಕೃತವಾಗಿ ಸೇರುತ್ತಿದ್ದರೆ, ಇನ್ನುಳಿದ ಸಂಸದರಾದ ಅಬು ತಾಹೇರ್ ಖಾನ್, ಖಲೀಲುರ್ ರೆಹಮಾನ್ ಹಾಗೂ ಯೂಸುಫ್ ಪಠಾಣ್ ಅವರು ತಮ್ಮ ಕ್ಷೇತ್ರಗಳ ರಾಜಕೀಯ ಮತ್ತು ಆಡಳಿತಾತ್ಮಕ ಸನ್ನಿವೇಶಗಳ ಕಾರಣದಿಂದ ಬಿಜೆಪಿಗೆ ಸೇರುವುದಿಲ್ಲ. ಬದಲಿಗೆ, ಅವರು ಹೊರಗಿನಿಂದಲೇ ಎನ್‌ಡಿಎ ಮೈತ್ರಿಕೂಟಕ್ಕೆ ತಮ್ಮ ಬೆಂಬಲ ಮುಂದುವರಿಸಲಿದ್ದಾರೆ ಎಂದು ಬಸುನಿಯಾ ತಿಳಿಸಿದ್ದಾರೆ.

ಬರಗಾಲ ಸರಳವಾಗಿ ಗಣೆಶೋತ್ಸವ

ಸೂರ್ಯಪ್ರಗತಿನ್ಯೂಸ್.ಕಾಂ

ಮಧುಗಿರಿ :– ಪಟ್ಟಣದಲ್ಲಿ ಊರ ಗಣಪತಿಯನ್ನು ಈ ಬಾರಿ ಬರಗಾಲದ ಹಿನ್ನೆಲೆಯಲ್ಲಿ ಸರಳವಾಗಿ ಆಚರಿಸಲಾಗುವುದು ಎಂದು ಶ್ರೀ ವಿದ್ಯಾ ಗಣಪತಿ ಮಹಾಮಂಡಳಿಯ ಸ್ಥಾಪಕ ಅಧ್ಯಕ್ಷ,, ಪುರಸಭೆವಮಾಜಿ ಅಧ್ಯಕ್ಷ ಎಂ.ವಿ. ಗೋವಿಂದರಾಜು ತಿಳಿಸಿದ್ದಾರೆ

ಪಟ್ಟಣದ ಎರಡು ಕಣ್ಣುಗಳಂತಿರುವ ಶ್ರೀ ಲಕ್ಷ್ಮಿ ವೆಂಕಟರಮಣ ಸ್ವಾಮಿ ದೇವಸ್ಥಾನ ಮತ್ತು ಶ್ರೀ ಮಲ್ಲೇಶ್ವರ ಸ್ವಾಮಿ ದೇವಸ್ಥಾನದ ಮಧ್ಯಭಾಗದ ಜಾಗದಲ್ಲಿ 2008ರಿಂದ ಆರಂಭಗೊಂಡ ಶ್ರೀ ಗಣೇಶೋತ್ಸವ ಕಾರ್ಯಕ್ರಮವನ್ನು ಶ್ರೀ ವಿದ್ಯಾ ಗಣಪತಿ ಮಹಾಮಂಡಳಿ ವತಿಯಿಂದ ಶ್ರೀ ಬಾಲಗಂಗಾಧರ ತಿಲಕ್ ಮಹಾ ಮಂಟಪದಲ್ಲಿ ಗಣೇಶನನ್ನು ಪ್ರತಿಷ್ಠಾಪಿಸಿ ಪ್ರತಿ ವರ್ಷವೂ 9 ದಿನಗಳ ಕಾಲ ಧಾರ್ಮಿಕ ಚಟುವಟಿಕೆಗಳ ಜೊತೆಗೆ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಿ ನಾನಾ ಜಾನಪದ ಕಲಾತಂಡಗಳೊಂದಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ವಿಸರ್ಜಿಸಲಾಗುತ್ತಿತ್ತು.

ಈ ಗಣೇಶೋತ್ಸವವನ್ನು ಪಕ್ಷಾತೀತವಾಗಿ ಮತ್ತು ಜಾತ್ಯಾತೀತವಾಗಿ ನಡೆಸಿಕೊಂಡು ಬರಲಾಗುತ್ತಿದೆ . ಪುರಸಭೆಯ ಅಧ್ಯಕ್ಷರು ಯಾರಾಗಿಸುತ್ತಾರೋ ಅವರ ಅಧ್ಯಕ್ಷತೆಯಲ್ಲಿಯೇ ಈ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. ಸರ್ವಧರ್ಮಿಯರು ಕೂಡ ಈ ಒಂದು ಗಣೇಶೋತ್ಸವಕಾರ್ಯಕ್ರಮದಲ್ಲಿಪಾಲ್ಗೊಂಡಿರುವುದಯ ವಿಶೇಷ .ಸಿದ್ದರಬೆಟ್ಟ ಶ್ರೀಗಳಾದ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮೀಜಿಗಳು ಪ್ರತಿ ವರ್ಷವೂ ಪ್ರತಿಷ್ಠಾಪನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು ವಿಶೇಷ.. ಕರೋನಾ ಸಂದರ್ಭದಲ್ಲಿಯೂ ಕೂಡ ಸರಳವಾಗಿ ಆಚರಣೆ ಮಾಡಲಾಗಿತ್ತು .ಶಾಸಕ ಕೆ. ಎನ್ .ರಾಜಣ್ಣ ಮತ್ತು ಎಂಎಲ್ಸಿ ಆರ್. ರಾಜೇಂದ್ರ ರವರು ಶಾಶ್ವತವಾಗಿ ಗಣಪತಿ ಪೆಂಡಾಲನ್ನು ನಿರ್ಮಿಸಿ ಕೊಟ್ಟಿದ್ದು, ಈ ಬಾರಿ ಸರಳವಾಗಿ ಆಚರಿಸಿ ಗಣೇಶನಲ್ಲಿ ತಾಲೂಕಿನಲ್ಲಿ ಉತ್ತಮ ಮಳೆ ಬೆಳೆ ಶಾಂತಿಗಾಗಿ ಪ್ರಾರ್ಥಿಸಲಾಗುವುದು ಎಂದು ಎಂ.ವಿ.ಗೋವಿಂದರಾಜು.ತಿಳಿಸಿದ್ದಾರೆ.ಜಿಲ್ಲಾ ಧಾರ್ಮಿಕ ಪರಿಷತ್ ಸದಸ್ಯ ಡಾ. ಎಂ .ಜಿ. ಶ್ರೀನಿವಾಸ್ ಮೂರ್ತಿ ,ಆರ್ ಎಲ್ ಎಸ್ ರಮೇಶ್,ಪುರಸಭೆಯ ಮಾಜಿ ಅಧ್ಯಕ್ಷರುಗಳು,ಸದಸ್ಯರುಗಳ ಹಾಗೂ ಭಕ್ತ ಮಂಡಳಿಯವರ ಸಹಕಾರದೊಂದಿಗೆ ಈ ಧಾರ್ಮಿಕ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದರು .

66 ಕೆಜಿ ಶುದ್ಧ ಚಿನ್ನದ ಆಭರಣ 335 ಕೆಜಿ ಬೆಳ್ಳಿಅಲಂಕಾರಗಳ ಗಣೇಶ ಚಿನ್ನಾಭರಣಗಳ ರಕ್ಷಣೆಗಾಗಿ 703.27 ಕೋಟಿ ರೂ. ವಿಮೆ

ಸೂರ್ಯಪ್ರಗತಿನ್ಯೂಸ್.ಕಾಂ

ಗಣೇಶ ಚತುರ್ಥಿ. ಇದು ಹಿಂದುಗಳ ಪವಿತ್ರ ಹಬ್ಬ. ಗಣಪತಿ ಪೂಜೆಯನ್ನ ಸಂಭ್ರಮ–ಸಡಗರದಿಂದ ಮಾಡಲಾಗುತ್ತದೆ. ದೇಶಾದ್ಯಂತ ಗಣೇಶ ಚತುರ್ಥಿ ಅತಿದೊಡ್ಡ ಹಬ್ಬವೇ ಆದರೂ, ಮಹಾರಾಷ್ಟ್ರ–ಮುಂಬೈ ಭಾಗದಲ್ಲಿ ಈ ಹಬ್ಬವನ್ನ ಮತ್ತಷ್ಟು ಅದ್ದೂರಿಯಾಗಿ ಆಚರಿಸುತ್ತಾರೆ.

11 ದಿನಗಳ ಕಾಲ ಗಣಪತಿಯನ್ನ ಇಟ್ಟುಕೊಳ್ಳುತ್ತಾರೆ. ಮುಂಬೈನಲ್ಲಿ ಗಣಪತಿ ಹಬ್ಬದ ಆಚರಣೆ ವಿಶಿಷ್ಟವಾಗಿದೆ. ಮುಂಬೈನಲ್ಲಿ ಲಾಲ್‌ಬಾಗ್ಚಾ ರಾಜಾ ಎಂಬುದು ಅತ್ಯಂತ ಪ್ರಸಿದ್ಧ ಮತ್ತು ಅಪ್ರತಿಮ ಸಾರ್ವಜನಿಕ ಗಣೇಶ ಮೂರ್ತಿಯಾಗಿದೆ. ಇಡೀ ಭಾರತದಲ್ಲೇ ಅತ್ಯಂತ ಜನಪ್ರಿಯ ಗಣೇಶೋತ್ಸವಗಳಲ್ಲಿ ಇದು ಅಗ್ರಪಂಕ್ತಿಯಲ್ಲಿ ನಿಲ್ಲುತ್ತದೆ. ಇಲ್ಲಿರುವ ಗಣಪತಿಯನ್ನ ಆಶಯಗಳ ರಾಜ ಎಂದೇ ಕರೆಯಲಾಗುತ್ತದೆ. ಹಾಗೇ, ಮುಂಬೈನ ಮಾತುಂಗದಲ್ಲಿರುವ ಜಿಎಸ್‌ಬಿ ಗಣಪತಿಗೂ ಬಹುದೊಡ್ಡ ಮಹತ್ವವೇ ಇದೆ.

ಈ ವರ್ಷ ಹೇಗಿದ್ದಾನೆ ಜಿಎಸ್‌ಬಿ ಗಣಪತಿ?

ಈ ವರ್ಷ, ಜಿಎಸ್‌ಬಿ ಸೇವಾ ಮಂಡಲವು 24 ಅಡಿ ಎತ್ತರದ ವಿಗ್ರಹ. ಅದಕ್ಕೆ ಸಂಬಂಧಿಸಿದ ಆಭರಣಗಳು ಮತ್ತು ಇತರ ಆಸ್ತಿಗಳಿಗೆ ಸುಮಾರು 703 ಕೋಟಿ ವಿಮಾ ರಕ್ಷಣೆಯನ್ನು ಪಡೆದುಕೊಂಡಿದೆ. ಇಲ್ಲಿನ ಬಪ್ಪನನ್ನ 66 ಕೆಜಿ ಶುದ್ಧ ಚಿನ್ನದ ಆಭರಣಗಳು ಮತ್ತು ಚಿನ್ನದ ಸಿಂಹಾಸನದಿಂದ ಅಲಂಕರಿಸಲಾಗಿದೆ. ಸರಿಸುಮಾರು 335 ಕೆಜಿ ಬೆಳ್ಳಿಯಿಂದ ಮಾಡಿದ ಅಲಂಕಾರಗಳು ಮತ್ತು ಅಲಂಕಾರಗಳು ಇಡೀ ಪಂಗಡದ ಭವ್ಯತೆಯನ್ನು ಮತ್ತಷ್ಟು ಹೆಚ್ಚಿಸುತ್ತವೆ. ಜಿಎಸ್‌ಬಿ ಗಣಪತಿಯು ಅತಿ ಶ್ರೀಮಂತ



ಬಪ್ಪ ಎನ್ನಿಸಿಕೊಂಡಿದ್ದಾನೆ. ಮುಂಬೈನ ಮಾತುಂಗಾದ ಕಿಂಗ್ಸ್ ಸರ್ಕಲ್‌ನಲ್ಲಿರುವ ಜಿಎಸ್‌ಬಿ ಸೇವಾ ಮಂಡಲ ಭಾರತದಲ್ಲೇ ಅತ್ಯಂತ ಪ್ರಸಿದ್ಧ ಹಾಗೂ ಅತಿ ಶ್ರೀಮಂತ ಗಣೇಶ ಮಂಡಳಿ ಎಂದು ಹೆಸರುವಾಸಿಯಾಗಿದೆ. ಭಕ್ತರು, ಸ್ವಯಂಸೇವಕರು ಮತ್ತು ಚಿನ್ನಾಭರಣಗಳ ರಕ್ಷಣೆಗಾಗಿ ಮಂಡಳಿಯು ಬರೋಬ್ಬರಿ ₹703.27 ಕೋಟಿ ರೂಪಾಯಿಗಳ ದಾಖಲೆಯ ವಿಮೆಯನ್ನು ಮಾಡಿಸಿದೆ. ಗಣಪತಿಯನ್ನ ಕೂರಿಸಿದ ಮಂಟಪಕ್ಕೆ ಭೇಟಿ ನೀಡುವ ಭಕ್ತರು, ಸೇವಕರು, ಅಲ್ಲಿ ಕೆಲಸ ಮಾಡುವ ಅಡುಗೆಯವರು, ಭದ್ರತಾ ಸಿಬ್ಬಂದಿ ಮತ್ತು ಕಾರ್ಯ ನಿರತ ಸಿಬ್ಬಂದಿಗೆ ಅತಿದೊಡ್ಡ ರಕ್ಷಣೆಯ ಭರವಸೆಯಾಗಿದೆ.

ಅತಿ ವಿಶೇಷ ಗಣಪತಿ..

ಮುಂಬೈನಲ್ಲಿ ಸುಮಾರು 2,700 ಸಾರ್ವಜನಿಕ ಗಣಪತಿ ಮಂಡಲಗಳು ಭಗವಾನ್ ಗಣೇಶನ ಭವ್ಯವಾದ ವಿಗ್ರಹಗಳನ್ನು ಸ್ಥಾಪಿಸಿವೆ. ಲಾಲ್‌ಬಾಗ್ಚಾ ರಾಜನ ಭವ್ಯತೆ ಮತ್ತು ಜನಪ್ರಿಯತೆ ವಿಶಿಷ್ಟವಾಗಿದ್ದರೂ, ಮುಂಬೈನ ಮಾತುಂಗದಲ್ಲಿರುವ ಜಿಎಸ್‌ಬಿ ಸೇವಾ ಮಂಡಲದ ಗಣಪತಿಯು ಸಂಪೂರ್ಣವಾಗಿ ವಿಭಿನ್ನ ಕಥೆಯಾಗಿದೆ. ಜಿಎಸ್‌ಬಿ ಸೇವಾ ಮಂಡಲದಲ್ಲಿ ಡಿಜೆ ಶಬ್ದ ಅಥವಾ ಜೋರಾದ ಸಂಗೀತವಿಲ್ಲ. ಇಲ್ಲಿನ ವಾತಾವರಣವು ವೇದ ಮಂತ್ರಗಳ ಪ್ರತಿಧ್ವನಿಯಿಂದ ತುಂಬಿದೆ. ಇಲ್ಲಿ ನೀವು ಶಾಂತವಾದ, ಅಧ್ಯಾತ್ಮಿಕ ಅನುಭವವನ್ನ ಪಡೆಯುತ್ತೀರಿ. ಮಂಟಪದಲ್ಲಿ ಎರಡು ವಿಶೇಷ ಹವನ ಕುಂಡಗಳನ್ನು ನಿರ್ಮಿಸಲಾಗಿದ್ದು, ಅಲ್ಲಿ ವೈದಿಕ ಬ್ರಾಹ್ಮಣರು ಐದು ದಿನಗಳ ಕಾಲ ದಿನದ 24 ಗಂಟೆಗಳ ಕಾಲ ಮಂತ್ರಗಳನ್ನು ಪಠಿಸುತ್ತಾ ಹವನಗಳನ್ನು ಮಾಡುತ್ತಾರೆ. ಈ ಹವನದಲ್ಲಿ ಸಲ್ಲಿಸುವ ಕಾಣಿಕೆಗಳು ಭಕ್ತರ ಆಶಯಗಳನ್ನು ಬಪ್ಪಾಗೆ ತಿಳಿಸುತ್ತವೆ ಎಂದು ನಂಬಲಾಗಿದೆ. ಜಿಎಸ್‌ಬಿಯ ಮತ್ತೊಂದು ವಿಶೇಷ ಸಂಪ್ರದಾಯವು ಸುಮಾರು 70 ವರ್ಷ ಹಳೆಯದು. ಮಂಟಪದ ಬಳಿ ಎರಡು ವಿಶೇಷ ತಕ್ಕಡಿಗಳನ್ನು ಇರಿಸಲಾಗಿದೆ. ಭಕ್ತರ ಆಸೆ ಈಡೇರಿದಾಗ, ಅವರು ತಮ್ಮ ಮಕ್ಕಳನ್ನು ಈ ತಕ್ಕಡಿಯಲ್ಲಿ ಇರಿಸಿ, ಅವರ ತೂಕಕ್ಕೆ ಸಮಾನವಾದ ಅಕ್ಕಿ, ಬೇಳೆ ಮತ್ತು ಇತರ ಧಾನ್ಯಗಳನ್ನು ದಾನ ಮಾಡುತ್ತಾರೆ. ಸಂಗ್ರಹಿಸಿದ ಧಾನ್ಯಗಳನ್ನು ವರ್ಷವಿಡೀ ನಿರ್ಗತಿಕರಿಗೆ ಮತ್ತು ಬಡವರಿಗೆ ಮಹಾಪ್ರಸಾದ ತಯಾರಿಸಲು ಬಳಸಲಾಗುತ್ತದೆ. ಇದರರ್ಥ ಇಲ್ಲಿ ನಂಬಿಕೆ ಕೇವಲ ದರ್ಶನಕ್ಕೆ ಸೀಮಿತವಾಗಿಲ್ಲ, ಬದಲಿಗೆ ಸೇವೆ ಮತ್ತು ದಾನದ ಸಂಪ್ರದಾಯವನ್ನು ಸಹ ಒಳಗೊಂಡಿದೆ.

ಮನುಷ್ಯ ದೇವರಾಗಲು ಸಾಧ್ಯವಿಲ್ಲ ಮನುಷ್ಯನನ್ನು ದೇವರಾಗಿಸಬಾರದು

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಬಹುತ್ವದ ನಾಡಿನಲ್ಲಿ ಜನರ ಶಾಂತಿಯುತ ಬದುಕು ಹೇಗೆ ಎಂಬುದನ್ನು ಪ್ರವಾದಿ ಮುಹಮ್ಮದ್(ಸ) ತಮ್ಮ ಪ್ರವಚನಗಳ ಮೂಲಕ ಅತ್ಯಂತ ಸರಳವಾಗಿ ವಿವರಿಸಿದ್ದಾರೆ. ಅವುಗಳನ್ನು ಪಾಲಿಸುವುದೇ ನಾವು ಪ್ರವಾದಿಗಳಿಗೆ ನೀಡುವ ನಿಜವಾದ ಸ್ಮರಣೆ ಎಂದು ಬೋರ್ಡ್ ಅಫ್ ಇಸ್ಲಾಮಿಕ್ ಏಜುಕೇಷನ್– ಕರ್ನಾಟಕದ ರಾಜ್ಯ ಕಾರ್ಯದರ್ಶಿ ರಿಯಾಜ್ ಅಹಮದ್ ರೋಣ ಅಭಿಪ್ರಾಯಪಟ್ಟಿದ್ದಾರೆ.

ನಗರದ ಬಾಲಭವನದಲ್ಲಿ ಜಮಾಅತೆ ಇಸ್ಲಾಮೀ ಹಿಂದ್, ತುಮಕೂರು ವತಿಯಿಂದ ಆಯೋಜಿಸಿದ್ದ ಕ್ರಾಂತಿಯ ಜ್ಯೋತಿ ಪ್ರವಾದಿ ಮುಹಮ್ಮದ್(ಸ) ಸೀರತ್ ಅಭಿಯಾನ–2026ರ ಸೀರತ್ ಪ್ರವಚನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು,ದ್ವೇಷ, ಕೋಮುವಾದ, ಅಪನಂಬಿಕೆ, ಹಗೆತನ ತುಂಬಿರುವ ಸಮಾಜದಲ್ಲಿ ಪ್ರೀತಿ, ಸೌಹಾರ್ದ, ಸಹೋದರತೆ, ಪರಸ್ಪರರ ನಂಬಿಕೆಯ ಮೂಲಕ ಸಮಾಜವನ್ನು ಕಟ್ಟುವುದು ಪ್ರವಾದಿ ಅವರ ಪ್ರತಿಪಾದನೆಯಾಗಿತ್ತು.ಆ ನಿಟ್ಟಿನಲ್ಲಿ ಎಲ್ಲಾ ಸಮುದಾಯಗಳು ಕೆಲಸ ಮಾಡಬೇಕಾದ ಅನಿವಾರ್ಯತೆ ಇದೆ ಎಂದರು.

ಪ್ರವಾದಿ ಅವರು ಹುಟ್ಟಿದ ಈ ತಿಂಗಳಲ್ಲಿ, ಅವರು ಪ್ರತಿಪಾದಿಸಿ ತತ್ವ, ಸಿದ್ದಾಂತಗಳನ್ನು ಜನರಿಗೆ ತಿಳಿಸುವ ಮೂಲಕ ನಮ್ಮ ನಡುವೆ ಇರುವ ಗೋಡೆಗಳನ್ನು ಸರಿಸಿ, ಮನುಷ್ಯರ ನಡುವೆ ಸೇತುವೆ ಕಟ್ಟುವುದು ಸೀರತ್ ಅಭಿಯಾನದ ಉದ್ದೇಶವಾಗಿದೆ. ಶಿಕ್ಷಣದಲ್ಲಿ ಕರುಣೆ, ಪ್ರೀತಿ, ಮಾನವೀಯತೆ ಅಂಶಗಳ ಜೊತೆಗೆ ಧಾರ್ಮಿಕ ಶಿಕ್ಷಣವನ್ನು ಭೋಧಿಸುವ ಮೂಲಕ ಇಂದಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದು ರಿಯಾಜ್ ಅಹಮದ್ ರೋಣ ನುಡಿದರು.

ಪ್ರವಾದಿಗಳು ಶಿಕ್ಷಣ, ಮಹಿಳಾ ಸಬಲೀಕರಣದ ಬಗ್ಗೆ ಬಹಳಷ್ಟು ಪ್ರವಚನಗಳನ್ನು ನೀಡಿದ್ದಾರೆ.1500 ವರ್ಷಗಳ ಹಿಂದೆಯೇ ಮಹಿಳೆಯರಿಗೆ ಶಿಕ್ಷಣ, ಆಸ್ತಿಯಲ್ಲಿ ಹಕ್ಕು, ಜೀವಿಸುವ ಹಕ್ಕು ಸಿಗಬೇಕೆಂಬುದು ಅವರ ಪ್ರತಿಪಾದನೆಯಾಗಿತ್ತು. ದೇವರ ಸೃಷ್ಟಿಯ ಬಗ್ಗೆ ಸ್ಪಷ್ಟ ಕಲ್ಪನೆಯಿತ್ತು. ಮನುಷ್ಯ ದೇವರಾಗಲು ಸಾಧ್ಯವಿಲ್ಲ. ಮನುಷ್ಯನನ್ನು ದೇವರಾಗಿಸಬಾರದು ಎಂಬುದು ಅವರ ನಿಲುವಾಗಿತ್ತು. ಆದರೆ ದೇವರಿದ್ದಾನೆ,ಅವನು ಎಲ್ಲವನ್ನು ನೋಡುತ್ತಿದ್ದಾನೆ ಎಂಬುದು ಮನುಷ್ಯ ತಪ್ಪು ಮಾಡುವುದನ್ನು ತಡೆಯುತ್ತದೆ ಎಂಬುದು ಅವರ ನಂಬಿಕೆಯಾಗಿತ್ತು.ಮನುಷ್ಯನನ್ನು ಪಾಪಪ್ರಜ್ಞೆಯಿಂದ ಮುಕ್ತಗೊಳಿಸಿದರು.ಶಿಕ್ಷಣದಿಂದ ಜ್ಞಾನಗಳಿಸುವ, ಜಗತ್ತಿನ ಕುರಿತು ಚಿಂತಿಸುವಂತೆ ಕರೆ ನೀಡಿದರು ಎಂದು ರಿಯಾಜ್ ಅಹಮದ್ ರೋಣ ಉದಾಹರಣೆಗಳ ಸಹಿತ ವಿವರಿಸಿದರು.

ಪತ್ರಕರ್ತ ಜಿ.ನಿ.ಪುರುಷೋತ್ತಮ್ ಮಾತನಾಡಿ,ಪ್ರವಾದಿಗಳ ವಿಚಾರ ಧಾರೆಗಳು ಜನಸಾಮಾನ್ಯರನ್ನು ತಲುಪುವ ನಿಟ್ಟಿನಲ್ಲಿ ಜಮಾಅತೆ ಇಸ್ಲಾಮೀ ಹಿಂದ್ ಒಳ್ಳೆಯ ಕೆಲಸ ಮಾಡುತ್ತಿದ್ದು, ಇಂತಹ ಕಾರ್ಯಕ್ರಮಗಳು ಹೆಚ್ಚಾದಾಗ, ಪರಸ್ಪರರಲ್ಲಿ ನಂಬಿಕೆ ಬೆಳೆದು ಸೌಹಾರ್ದ ವಾತಾವರಣ ನಿರ್ಮಾಣಕ್ಕೆ ಸಹಕಾರಿಯಾಗಲಿದೆ. ಪ್ರವಾದಿಗಳು 1500 ವರ್ಷಗಳ ಹಿಂದೆ ಹೇಳಿದ ಮಾತುಗಳು ಇಂದಿಗೂ ಪ್ರಸ್ತುತವಾಗಿವೆ. ಮನುಷ್ಯರನ್ನು ಮನುಷ್ಯರಾಗಿ ನೋಡುವುದನ್ನು ನಾವುಗಳು ರೂಢಿಸಿಕೊಳ್ಳಬೇಕಿದೆ. ಎಲ್ಲಾ ಧರ್ಮಗಳ ಬೋಧನೆಯೂ ದಯೆ ಮತ್ತು ಕರುಣೆಯೇ ಆಗಿದೆ. ಅದನ್ನು ನಾವುಗಳು ಪಾಲಿಸಬೇಕಾಗಿದೆ ಎಂದರು.

ನಿವೃತ್ತ ಪ್ರಾಧ್ಯಾಪಕ ಡಾ.ಸಿದ್ದಲಿಂಗಯ್ಯ ಮಾತನಾಡಿ,ಜ್ಞಾನವೂ ಎಲ್ಲೇ ಇರಲಿ,ಅದನ್ನು ಪಡೆದುಕೊಳ್ಳಬೇಕು ಎಂಬುದು ಪ್ರವಾದಿ ಅವರ ಸಂದೇಶವಾಗಿತ್ತು.ನಲವತ್ತು ವರ್ಷಗಳ ಕಾಲ ಸಮಾಜಕ್ಕೆ ಅಂಟಿದ ಕೊಳೆಯನ್ನು ತೊಳೆಯುವ ಪ್ರಯತ್ನವನ್ನು ಪ್ರವಾದಿಗಳು ನಡೆಸಿದ್ದರು. ತಾವು ಅನುಭವಿಸಿ, ಇತರರಿಗೆ ಮಾರ್ಗದರ್ಶನ ಮಾಡಿದರು.ಏಕತ್ವ ಒಂದೊಮ್ಮೆ ವಿಜೃಂಭಿಸಿದರೂ, ಬಹುತ್ವವೇ ಜೀವಾಳ ಎಂಬುದು ಅವರ ಸರಳ ಸಂದೇಶ.ಪರಸ್ಪರರಲ್ಲಿನ ಅಪನಂಬಿಕೆ ಹೋಗಬೇಕು.ಎಲ್ಲ ಧರ್ಮಗಳಲ್ಲಿಯೂ ಮೂಲಭೂತವಾದವಿದೆ.ಅದನ್ನು ತಡೆಯಲು ಪ್ರವಾದಿಗಳು ಶ್ರಮಿಸಿದ್ದರು.ಅವರು ಹಿಂಸೆ ಅನುಭವಿಸಿ, ನಮಗೆ ನೆಮ್ಮದಿಯನ್ನು ನೀಡಿ ಹೋಗಿದ್ದಾರೆ. ಒಳ್ಳೆಯ ಮಾತುಗಳನ್ನು ಹಂಚಿಕೊಳ್ಳುವ ಕೆಲಸ ಆಗಬೇಕು ಎಂದರು.

ಕಾರ್ಯಕ್ರಮದಲ್ಲಿ ಜಮಾಅತೆ ಇಸ್ಲಾಮೀ ಹಿಂದ್ ತುಮಕೂರು ಘಟಕದ ಅಧ್ಯಕ್ಷರಾದ ಅಸ್ಗರ್ ಅಹಮದ್,ತಮೀಜುದ್ದೀನ್, ಜಮಾಅತೆ ಇಸ್ಲಾಮೀ ಹಿಂದ್‌ನ ಪದಾಧಿಕಾರಿಗಳು ಉಪಸ್ಥಿತರಿದ್ದರು.ವಿವಿಧ ಧರ್ಮಗಳ ಜನರು, ಮಹಿಳೆಯರು ಸೀರತ್ ಪ್ರವಚನ

ಜಾತಿ ಧರ್ಮಗಳನ್ನು ಮರೆತು ಸಹ ಬಾಳ್ವೆ ಜೀವನ ನಡೆಸಿದರೆ ಶಾಂತಿ ನೆಮ್ಮದಿ

ಸೂರ್ಯಪ್ರಗತಿನ್ಯೂಸ್.ಕಾಂ

ಕೊರಟಗೆರೆ – ಕೊರಟಗೆರೆ ಪಟ್ಟಣದಲ್ಲಿ ನೂತನ ಬಡಾವಣೆಗೆ ಗಂಗಾಧರೇಶ್ವರ ಮತ್ತು ಅನ್ನಪೂರ್ಣೇಶ್ವರಿ ದೇವರುಗಳ ಹೆಸರನ್ನು ನಾಮಕರಣ ಮಾಡಿರುವುದು ಪಟ್ಟಣದ ಸನಾತನ ದೈವವನ್ನು ಸದಾ ನೆನೆದಂತಾಗಲಿದೆ ಎಂದು ಶ್ರೀ ವೀರಭದ್ರಶಿವಾಚಾರ್ಯಸ್ವಾಮೀಜಿ ತಿಳಿಸಿದರು.

ಅವರು ಕೊರಟಗೆರೆ ಪಟ್ಟಣದ ಮಾರುತಿ ಕಲ್ಯಾಣ ಮಂಟಪದಿಂದ ಬೈಪಾಸ್‌ಗೆ ಹೋಗುವ ರಸ್ತೆಯಲ್ಲಿನ ನೂತನ ಬಡಾವಣೆಯನ್ನು ಗಂಗಾಧರೇಶ್ವರ ಬಡಾವಣೆ ಮತ್ತು ಬೈಪಾಸ್ ರಸ್ತೆಯಿಂದ ದೊಡ್ಡಮಲ್ಲಯ್ಯ ಪಾಳ್ಯ ಗ್ರಾಮದ ಮದ್ಯದ ರಸ್ತೆಯ ನೂತನ ಬಡಾವಣೆಯನ್ನು ಅನ್ನಪೂರ್ಣೇಶ್ವರಿ ಬಡಾವಣೆಯಂದು ನಾಮಫಲಕಗಳನ್ನು ಉದ್ಘಾಟಿಸಿ ಮಾತನಾಡಿ ನೂತನ ಬಡಾವಣೆಗಳಲ್ಲಿ ವಿವಿಧ ಕಡೆಗಳಿಂದ ಬಂದು ಜನರು ನೆಲೆಸುತ್ತಾರೆ ಹಾಗೆ ನೆಲಸುವವರು ಜಾತಿ ಧರ್ಮಗಳನ್ನು ಮರೆತು ಸಹ ಬಾಳ್ವೆಯಿಂದ ಜೀವನ ನಡೆಸಿದರೆ ಆ



ಬಡಾವಣೆ ಶಾಂತಿ ನೆಮ್ಮದಿಯಿಂದ ಇರುತ್ತದೆ ಎಂದರು.

ಹಿಂದಿನ ಕಾಲದಲ್ಲಿ ಹೊಸದಾಗಿ ನಗರ ಅಥವಾ ಗ್ರಾಮ ನಿರ್ಮಾಣ ಮಾಡಬೇಕಾದರೆ ವಾಸ್ತು ಶಾಸ್ತ್ರದ ಮೂಲಕ ನಿರ್ಮಾಣ ಮಾಡುತ್ತಿದ್ದರು, ನಿರ್ಮಾಣಕ್ಕೆ ಮೊದಲು ದೇವ ಮೂಲೆಯ ಎತ್ತರದ ಪ್ರದೇಶದಲ್ಲಿ ದೇವರನ್ನು ಪ್ರತಿಷ್ಠಾಪಿಸುತ್ತಿದ್ದರು ಆಗ ಗ್ರಾಮಕ್ಕೆ ಮೂಲ ಭೂತ ಸೌಕರ್ಯಗಳು ನೀರಿನ ಒಳಅರಿವುಗಳು ದೊರೆಯುತ್ತಿದ್ದವು ಕೊರಟಗೆರೆ ಪಟ್ಟಣದ ಗಂಗಾಧರೇಶ್ವರ ಸ್ವಾಮಿ ಐತಿಹಾಸಿಕ ಪುರಾಣದ ಉದ್ಭವ ಲಿಂಗವಾಗಿದ್ದು ಆ ದೇವರ ಹೆಸರಿನ ಬಡಾವಣೆ ಉದ್ಘಾಟನೆ ನನಗೆ ಅತ್ಯಂತ ಸಂತೋಷ ತಂದು ಕೊಟ್ಟಿದೆ, ಅದೇ ರೀತಿ ಅನ್ನಪೂರ್ಣೇಶ್ವರಿ ಬಡಾವಣೆ ಕೂಡವಾಗಿದೆ, ಒಟ್ಟಾರೆ ಸೌಹಾರ್ದಯುತ ಜೀವನ ಸಮಾಜಕ್ಕೆ ನೆಮ್ಮದಿ ನೀಡುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಎರಡು ಬಡಾವಣೆಯ ಮಹಿಳೆಯರು ಪೂರ್ಣಕುಂಭ ಕಳಸವನ್ನು ಹೊತ್ತು ಸ್ವಾಮೀಜಿಯವನ್ನು ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಬಡಾವಣೆಯ ಕೆ.ಆರ್.ಓಬಳರಾಜು, ಎಲ್.ರಾಜಣ್ಣ, ಮುರಳಿಗೌಡ್ರು, ಎನ್.ಮೂರ್ತಿ, ಚಂದ್ರಶೇಖರ್ ಅರಸ್, ಎಲ್.ಐ.ಸಿ ಗೋಪಾಲ್, ಡಾ.ಹರೀಶ್, ರಘುನಾಥ್, ಗುರುಸ್ವಾಮಿ ಪೂಜಾರ್, ನರೇಂದ್ರ, ಟಿ.ಕೆ.ಮಂಜುನಾಥ್, ಸೋಮಶೇಖರ್, ಹೆಚ್.ಡಿ.ಹನುಮಂತರಾಜು, ದೀಪಕ್, ಜಯಸಿಂಹ ಸೇರಿದಂತೆ ಹಲವರು ಹಾಜರಿದ್ದರು.

ಪುರಾಣ –ಇತಿಹಾಸ ಪ್ರಸಿದ್ಧ ಸಂಜೀವಿನಿ ತಾಣ ಸಿದ್ದರಬೆಟ್ಟ ಇದೀಗ ಜಾಗೃತ ಹಾಗೂ ನಿತ್ಯ ದಾಸೋಹ ಕೇತ್ರ

ಸೂರ್ಯಪ್ರಗತಿನ್ಯೂಸ್.ಕಾಂ

ಪುರಾಣ ಮತ್ತು ಇತಿಹಾಸಗಳಲ್ಲಿ ಪ್ರಸಿದ್ಧವಾದ ಸಾವಿರಾರು ವರ್ಷಗಳಿಂದಲೂ ಪವಿತ್ರ ಪುಣ್ಯಕ್ಷೇತ್ರವಾಗಿ ಬರುವ ಭಕ್ತರನ್ನ ಆಶೀರ್ವದಿಸಿ ಕಾಯುತ್ತಿರುವಂತ ಪುಣ್ಯ ಕ್ಷೇತ್ರವೇ ಶ್ರೀ ಕ್ಷೇತ್ರ ಸಿದ್ದರಬೆಟ್ಟ ಸಾಧಕರಿಗೆ ತಪಸ್ವಿಗಳಿಗೆ ಸಿದ್ದಿ ಸಾಧನೆಗೈಯುವಂತ ಸತ್ಪುರುಷರಿಗೆ ಕಾರಣವಾಗಿರುವಂತ ಈ ಕ್ಷೇತ್ರ ಅತ್ಯಂತ ಪವಿತ್ರ ಮತ್ತು ಜಾಗೃತ ಕ್ಷೇತ್ರವಾಗಿದೆ "ಸಿದ್ದರಬೆಟ್ಟ ಎಂಬ ಪವಿತ್ರ ನಾಮದಿಂದ ಪ್ರಸಿದ್ಧಿಯಾಗಿರುವ ಶ್ರೀ ಕ್ಷೇತ್ರ ಸಿದ್ಧರಬೆಟ್ಟವು, ಶ್ರೀ ಗುರು ಸಿದ್ದೇಶ್ವರ ಸ್ವಾಮಿಗಳವರ ಕೃಪಾಕಟಾಕ್ಷದಿಂದ ಪಾವನಗೊಂಡಿರುವ ಕ್ಷೇತ್ರವಾಗಿದೆ. ಅನಾದಿಕಾಲದಿಂದಲೂ ಭಕ್ತರ ಭಕ್ತಿಭಾವ, ನಂಬಿಕೆ ಹಾಗೂ ಆಧ್ಯಾತ್ಮಿಕ ಸಾಧನೆಗಳಿಗೆ ಆಶ್ರಯಸ್ಥಾನವಾಗಿರುವ ಈ ಕ್ಷೇತ್ರವು, ಅಸಂಖ್ಯಾತ ಭಕ್ತರ ಬದುಕಿಗೆ ದೈವಿಕ ಬೆಳಕನ್ನು ನೀಡುತ್ತ ಬಂದಿದೆ.

ಶ್ರೀ ಕ್ಷೇತ್ರದ ಸದ್ಭಕ್ತರ ಅಪೇಕ್ಷೆ ಹಾಗೂ ಶ್ರೀಮದ್ ರಂಭಾಪುರಿ ಜಗದ್ಗುರುಗಳವರ ದೂರದೃಷ್ಟಿ ಮತ್ತು ದಿವ್ಯ ಸಂಕಲ್ಪದ ಫಲವಾಗಿ, ವೀರಶೈವ ಪಂಚಪೀಠಗಳಲ್ಲಿ ಒಂದಾದ ಶ್ರೀಮದ್ ರಂಭಾಪುರಿ ಪೀಠದಿಂದ ಶ್ರೀ ಕ್ಷೇತ್ರ ಸಿದ್ಧರಬೆಟ್ಟದಲ್ಲಿ ಬಾಳೆಹೊನ್ನೂರುಖಾಸಾ ಶಾಖಾ ಮಠವನ್ನು ಸ್ಥಾಪಿಸಲಾಯಿತು. ಶ್ರೀಮಠದ ಪ್ರಥಮ ಮಠಾಧಿಪತಿಗಳಾಗಿ ಪೂಜ್ಯ ಶ್ರೀ ಶ್ರೀ ಷ.ಬ್ರ. ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳವರನ್ನು ನಿಯುಕ್ತಿಗೊಳಿಸಿ, ಶ್ರೀ ಕ್ಷೇತ್ರದ ಅಭಿವೃದ್ಧಿ ಮತ್ತು ಲೋಕಕಲ್ಯಾಣದ ಮಹತ್ಕಾರ್ಯಕ್ಕೆ ಭದ್ರ ಅಡಿಪಾಯ ಹಾಕಲಾಯಿತು.

ಅಂದಿನಿಂದ ಪೂಜ್ಯ ಶ್ರೀಗಳವರ ದಿವ್ಯ ಮಾರ್ಗದರ್ಶನ ಮತ್ತು ಆಶೀರ್ವಾದದ ನೆರಳಿನಲ್ಲಿ, ಶ್ರೀ ಕ್ಷೇತ್ರಕ್ಕೆ ಆಗಮಿಸುವ ಸಮಸ್ತಸದ್ಭಕ್ತರುಗಳಿಗೆ ನಿತ್ಯ ದಾಸೋಹದ ಪವಿತ್ರ ಪರಂಪರೆಯನ್ನು ನಿರಂತರವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಶ್ರೀ ಮಠದ ಶ್ರೀಗಳ ಯಾವುದೇ ಬಡವ ಶ್ರೀಮಂತ ಬರಲಿ ಯಾವುದೇ ಜಾತಿ ಧರ್ಮದವರೇ ಬರಲಿ ಎಲ್ಲರನ್ನೂ ಸಮಾನವಾಗಿ ಮಾತನಾಡಿಸಿ ಪ್ರಸಾದ ಮಾಡಿಸಿ ಬಿಳ್ಕೊಡುವ ಗುರುಗಳ ಗುಣ ಆದರ್ಶವಾದದ್ದು ನಮ್ಮೆಲ್ಲರಿಗೂ ಪ್ರೇರಣದಾಯಕವಾಗಿದ್ದು. ಶ್ರೀಮಠದಲ್ಲಿ ಎಲ್ಲ ಜಾತಿ ಧರ್ಮದ ಬಡ ವಿದ್ಯಾರ್ಥಿಗಳು ನಮ್ಮ ರಾಜ್ಯದ ಮಕ್ಕಳಲ್ಲದೆ ಆಂಧ್ರ,



ತೆಲಂಗಾಣ ಮತ್ತು ಮೇಘಾಲಯದ ರಾಜ್ಯದ ಮಕ್ಕಳು ಶ್ರೀಮಠದಲ್ಲಿ ಓದುತ್ತಿರುವುದು ಶ್ರೀಮಠದ ಕಾರ್ಯಕ್ಕೆ ಕೈಗನ್ನಡಿಯಾಗಿದೆ.

ಆರಂಭಿಕ ದಿನಗಳಲ್ಲಿ ದಾಸೋಹದಲ್ಲಿ ಭಾಗವಹಿಸಿದ ಭಕ್ತರಿಗೆ ಅನ್ನ, ಸಾಂಬಾರು ಹಾಗೂ ಮಜ್ಜಿಗೆ ಪ್ರಸಾದವನು ವಿತರಿಸಲಾಗುತ್ತಿತ್ತು. ಕಾಲಕ್ರಮೇಣ ಭಕ್ತರ ಸಂಖ್ಯೆ ಹಾಗೂ ಶ್ರೀಮಠದ ಸೇವಾ ವ್ಯಾಪ್ತಿ ವಿಸ್ತಾರಗೊಂಡಂತೆ, ಶ್ರೀಮಠದ ದಶಮಾನೋತ್ಸವದ ಸಂದರ್ಭದಲ್ಲಿ ಪೂಜ್ಯ ಶ್ರೀಗಳವರ ದಿವ್ಯ ಸಂಕಲ್ಪದಂತೆ ನಿತ್ಯ ದಾಸೋಹ ವ್ಯವಸ್ಥೆಗೆ ಮತ್ತಷ್ಟು ವೈಭವವನ್ನು ನೀಡಲಾಯಿತು. ಅದರಂತೆ ಬೆಳಗಿನ ಸಮಯದಲ್ಲಿ ಭಕ್ತರಿಗೆ *ಬೆಳಗ್ಗೆ 10 ಗಂಟೆವರೆಗೆ ಲಘು ಉಪಹಾರದ ವ್ಯವಸ್ಥೆ, 10 ಗಂಟೆಯಿಂದ ರಾತ್ರಿ 9:00 ಗಂಟೆವರೆಗೆ ಸವಿಯಾದ ಪಾಯಸದ ಅನ್ನ, ಸಾಂಬಾರು ಮಜ್ಜಿಗೆಯೊಂದಿಗೆ ಪ್ರಸಾದವನ್ನುನೀಡುವ ಪರಂಪರೆಯನ್ನು ಆರಂಭಿಸಲಾಯಿತು.

ಶ್ರೀ ಕ್ಷೇತ್ರ ಸಿದ್ಧರಬೆಟ್ಟದಲ್ಲಿ, ಶ್ರೀ ಗುರು ಸಿದ್ದೇಶ್ವರ ಸ್ವಾಮಿಗಳವರಿಗೆ ಹೋಳಿಗೆ ತುಪ್ಪ ಆರಾಧನೆ ಸಲ್ಲಿಸುವ ವಿಶಿಷ್ಟ ಸಂಪ್ರದಾಯವು ಭಕ್ತಿಭಾವದೊಂದಿಗೆ ನಡೆದುಕೊಂಡು ಬಂದಿದೆ. ಇದು ಕೇವಲ ನೈವೇದ್ಯದ ಆಚರಣೆಯಲ್ಲ; ಭಕ್ತರ ಅಚಲ ನಂಬಿಕೆ, ಹರಕೆ ಮತ್ತು ಗುರುಭಕ್ತಿಯ ಸಜೀವ ಪ್ರತೀಕವಾಗಿದೆ.

ಹಿಂದಿನ ಕಾಲದಲ್ಲಿ ದೂರದೂರಿನಿಂದ ಆಗಮಿಸುತ್ತಿದ್ದ ಭಕ್ತಾದಿಗಳು ಎತ್ತಿನ ಬಂಡಿಗಳಲ್ಲಿ ಕುಟುಂಬ ಸಮೇತರಾಗಿ ಶ್ರೀ ಕ್ಷೇತ್ರಕ್ಕೆ ಬಂದು, ಇಲ್ಲಿಯೇ ಹೋಳಿಗೆಯನ್ನು ಸಿದ್ಧಪಡಿಸಿ ಶ್ರೀ ಗುರು ಸಿದ್ದೇಶ್ವರ ಸ್ವಾಮಿಗಳಿಗೆ ನೈವೇದ್ಯ ಅರ್ಪಿಸುತ್ತಿದ್ದರು. ತದನಂತರ ಆ ಪವಿತ್ರ ಪ್ರಸಾದವನ್ನು ಆಗಮಿಸಿದ ಭಕ್ತರಿಗೆ ದಾಸೋಹವಾಗಿ ವಿತರಿಸಿ, ತಮ್ಮ ಹರಕೆಗಳನ್ನು ಸಮರ್ಪಿಸಿಕೊಂಡು ಶ್ರೀ ಗುರು ಸಿದ್ದೇಶ್ವರರ ಕೃಪಾಶೀರ್ವಾದಕ್ಕೆ ಪಾತ್ರರಾಗುತ್ತಿದ್ದರು. ಹೀಗೆ ಹೋಳಿಗೆ ತುಪ್ಪ ಆರಾಧನೆಯು ಭಕ್ತಿ, ಸಮರ್ಪಣೆ ಮತ್ತು ದಾಸೋಹದ ಸುಂದರ ಸಂಗಮವಾಗಿ ಪೀಳಿಗೆಯಿಂದ ಪೀಳಿಗೆಗೆ ಹರಿದು ಬಂದಿದೆ.

ಆದರೆ ಇಂದು ಸಮಯದ ಅಭಾವದಿಂದ ಬಹಳಷ್ಟು ಭಕ್ತರು ಹೋಳಿಗೆ ತುಪ್ಪದ ಆರಾಧನೆಯನ್ನು ಮಾಡಿಸುವಂತದ್ದು ಕಡಿಮೆಯಾಗುತ್ತಿದೆ

ಈ ಪುರಾತನ ಪರಂಪರೆಯ ಮಹತ್ವವನ್ನು ಮನಗಂಡು, ಪೂಜ್ಯ ಶ್ರೀ ಶ್ರೀ ಷ.ಬ್ರ. ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ಒತ್ತಾಸೆ ಹಾಗೂ ದಿವ್ಯ ಸಂಕಲ್ಪದ ಮೇರೆಗೆ, ಶ್ರೀಮಠದಲ್ಲಿ ನಿತ್ಯವೂ ಶ್ರೀ ಗುರು ಸಿದ್ದೇಶ್ವರ ಸ್ವಾಮಿಗಳಿಗೆ ಹೋಳಿಗೆ ತುಪ್ಪ ಆರಾಧನೆಯನ್ನು ನಿರಂತರವಾಗಿ ನಡೆಸುವ ಮಹೋನ್ನತ ಸೇವಾಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಭಕ್ತರ ಹರಕೆಗಳು ಸಾರ್ಥಕವಾಗಲಿ, ಸದ್ಭಕ್ತರ ಮನೋರಥಗಳು ಈಡೇರಲಿ ಹಾಗೂ ಲೋಕಕಲ್ಯಾಣ ವೃದ್ಧಿಯಾಗಲಿ ಎಂಬ ಉದಾತ್ತ ಆಶಯವು ಈ ಸಂಕಲ್ಪದ ಹಿಂದಿನ ಪ್ರೇರಣೆಯಾಗಿದೆ.

ಈ ನಿಟ್ಟಿನಲ್ಲಿ ಶ್ರೀಮಠಕ್ಕೆ ನಿತ್ಯ ಆಗಮಿಸುವ ಭಕ್ತಾದಿಗಳ ಸೇವಾರ್ಥವಾಗಿ, ದಾಸೋಹ ವ್ಯವಸ್ಥೆಯಲ್ಲಿ ಬೆಳಗಿನ ವೇಳೆಯಲ್ಲಿ ಲಘು ಉಪಹಾರದ ವ್ಯವಸ್ಥೆ ಹಾಗೂ ಮಧ್ಯಾಹ್ನ ಮತ್ತು ರಾತ್ರಿ ಹೋಳಿಗೆ ತುಪ್ಪ ಪ್ರಸಾದ, ಅನ್ನ, ಸಾರು ಮತ್ತು ಮಜ್ಜಿಗೆಯನ್ನು ಭಕ್ತಿಪೂರ್ವಕವಾಗಿ ವಿತರಿಸುವ ಸಂಕಲ್ಪವನ್ನು ಕೈಗೊಳ್ಳಲಾಗಿದೆ.

ಶ್ರೀ ವೀರಭದ್ರೇಶ್ವರ ಸ್ವಾಮಿ ನಿತ್ಯ ದಾಸೋಹ ಸಮಿತಿ

ಈ ಮಹತ್ಕಾರ್ಯದ ಶಾಶ್ವತ ನಿರ್ವಹಣೆಗಾಗಿ ಅಗತ್ಯವಿರುವ ದೇಣಿಗೆ ಸಂಗ್ರಹ ಕಾರ್ಯವು ಇದೀಗ ಪ್ರಾರಂಭಗೊಂಡಿದ್ದು, ಸದ್ಭಕ್ತದಾನಿಗಳು ತಮ್ಮ ಶಕ್ತ್ಯಾನುಸಾರ ಕೈಜೋಡಿಸಿ ಈ ಪುಣ್ಯಯಜ್ಞದಲ್ಲಿ ಪಾಲ್ಗೊಳ್ಳುವಂತೆ ಶ್ರೀಮಠವು ಆತ್ಮೀಯ ಆಹ್ವಾನ ನೀಡುತ್ತಿದೆ.

ಈ ಯೋಜನೆಗೆ ಉದಾರ ಮನಸ್ಸಿನಿಂದ 11 ಲಕ್ಷ ದೇಣಿಗೆಯನ್ನು ಸಮರ್ಪಿಸುವ ಮಹನೀಯರನ್ನು "ಮಹಾಪೋಷಕ ದಾನಿಗಳು" ಎಂದು ಗೌರವಪೂರ್ವಕವಾಗಿ ಪರಿಗಣಿಸಲಾಗುವುದು. ಇಂತಹ ಮಹಾಪೋಷಕರನ್ನು ಶ್ರೀಮಠದ ದಾಸೋಹ ಸಮಿತಿಯ ಶಾಶ್ವತ ಮಹಾ ಪೋಷಕರಾಗಿ ಗೌರವಿಸಲಾಗುವುದು.

ಈ ಯೋಜನೆಯ ಮಹಾಪೋಷಕ ಸದಸ್ಯತ್ವಕ್ಕೆ ದೇಣಿಗೆಯ ಮೊತ್ತವನ್ನು 11,00,000/– (ಹನ್ನೊಂದು ಲಕ್ಷ ರೂಪಾಯಿಗಳು), ಪೋಷಕ ಸದಸ್ಯತ್ವಕ್ಕೆ 5,00,000/– (ಐದು ಲಕ್ಷ ರೂಪಾಯಿಗಳನ್ನು) ಮತ್ತು ಸಾಮಾನ್ಯ ಸದಸ್ಯತ್ವಕ್ಕೆ 1,00,000/– ಒಂದು ಲಕ್ಷ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ.

ಒಂದು ಲಕ್ಷ ರೂಪಾಯಿ ದೇಣಿಗೆಯನ್ನು ಸಮರ್ಪಿಸಿದ ಸದ್ಭಕ್ತರು ತಾವು ತಿಳಿಸಿದ ದಿನದಂದು ಪೂಜೆ ಮಾಡಿ ಆ ದಿವಸದ ದಾಸೋಹ ಸೇವೆಯನ್ನು ತಮ್ಮ ಹೆಸರಿನಲ್ಲಿ ಚಿರಂತನವಾಗಿ ಈ ಕಾರ್ಯವನ್ನು ನಡೆಸಲಾಗುತ್ತದೆ ತಮ್ಮ ತಂದೆ ತಾಯಿಯ ಸ್ಮರಣಾರ್ಥವಾಗಿ ಅಥವಾ ತಮ್ಮ ಜನ್ಮದ ನಿಮಿತ್ಯವಾಗಿ ಅಥವಾ ವಿವಾಹ ವಾರ್ಷಿಕೋತ್ಸವದ ದಿನದಂದು ತಾವು ಸಮರ್ಪಿಸಿ ಆ ದಿವಸ ಶ್ರೀಮಠದ ವಿದ್ಯಾರ್ಥಿಗಳಿಗೆ ಮತ್ತು ಆಗಮಿಸುವಂತಹ ಸಮಸ್ತ ಎಲ್ಲ ಭಕ್ತರಿಗೆ ದಾಸೋಹವನ್ನು ನಡೆಸುತ್ತಿವೆ ಹಾಗೂ ಒಂದು ಲಕ್ಷ ಹಣವನ್ನು ನೀಡಿದ ಸದ್ಭಕ್ತರನ್ನ ಸಮಿತಿಯ ಸದಸ್ಯರನ್ನಾಗಿ ನೇಮಕ ಮಾಡುತ್ತಿದೆ

ಶ್ರೀಮಠದ ಸದ್ಭಕ್ತರಾದ ತಾವುಗಳೆಲ್ಲರ ಪ್ರತ್ಯಕ್ಷ ಹಾಗೂ ಪರೋಕ್ಷ ಸಹಕಾರ ಮತ್ತು ಬೆಂಬಲದಿಂದ, ಪೂಜ್ಯ ಶ್ರೀ ಶ್ರೀ ಷ.ಬ್ರ. ವೀರಭದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ನೇತೃತ್ವ ಹಾಗೂ ಘನ ಅಧ್ಯಕ್ಷತೆಯಲ್ಲಿ ಈ ಮಹತ್ವದ ಯೋಜನೆಯು ರೂಪುಗೊಂಡಿದ್ದು, ಪೂಜ್ಯರ ಸತ್ಸಂಕಲ್ಪವನ್ನು ಸಾಕಾರಗೊಳಿಸುವ ಉದ್ದೇಶದಿಂದ ಅನುಷ್ಠಾನದ ಹಂತಕ್ಕೆ ತರಲಾಗುತ್ತಿದೆ. ಈ ಪುಣ್ಯ ಕಾರ್ಯದಲ್ಲಿ ತಾವುಗಳು ಪ್ರೋತ್ಸಾಹ ಮತ್ತು ಸಹಕಾರ ನೀಡಬೇಕೆಂದು ಈ ಮೂಲಕ ಪ್ರಾರ್ಥಿಸುತ್ತೇವೆ.

ಬುಕನಾನ್ ಅಧ್ಯಯನ ಜಾತಿ ಸಮೀಕ್ಷೆಗೆ ಪ್ರೇರಣೆ

ಸೂರ್ಯಪ್ರಗತಿನ್ಯೂಸ್.ಕಾಂ



ಮಧುಗಿರಿ: ಜಾಗತಿಕ ಆಗು-ಹೋಗುಗಳ ವಿಚಾರದ ಜೊತೆಗೆ ತಾವು ಬದುಕಿರುವ ಊರು ಅಲ್ಲಿನ ಸಂಸ್ಕೃತಿ ಮತ್ತು ಸಮಕಾಲಿನ ಸ್ಥಿತಿಗತಿಗಳ ಅರಿವನ್ನು ಪ್ರತಿಯೊಬ್ಬರು ಗಳಿಸಿಕೊಳ್ಳಬೇಕು. ಈ ಕೆಲಸ ವಿದ್ಯಾರ್ಥಿ ದೆಸೆಯಿಂದಲೇ ಆರಂಭವಾಗಬೇಕು ಎಂದು ಜಾನಪದ ವಿದ್ವಾಂಸ ಪ್ರೊ.ಮೀರಸಾಬಿಹಳ್ಳಿ ಶಿವಣ್ಣ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತಿಹಾಸ ಮತ್ತು ಕನ್ನಡ ವಿಭಾಗದ ಅಡಿಯಲ್ಲಿ ನಡೆದ 'ಬುಕನಾನ್ ಕಂಡಂತೆ ಮಧುಗಿರಿ' ವಿಚಾರಗೋಷ್ಠಿಯಲ್ಲಿ ಮಾತನಾಡಿದ ಅವರು ಸ್ಥಳೀಯ ಇತಿಹಾಸ ಜನಪದ ಇತಿಹಾಸವನ್ನು ಅಧ್ಯಯನ ಮಾಡಬೇಕು. ಸಂಶೋಧನೆಯಲ್ಲಿನ ಕ್ರಮಬದ್ಧತೆ ಜೊತೆಗೆ ಕ್ಷೇತ್ರಕಾರ್ಯ ಕೈಗೊಂಡರೆ ಸ್ಥಳೀಯ ಇತಿಹಾಸವು ರಾಷ್ಟ್ರದ ಇತಿಹಾಸವಾಗಲಿದೆ. ಈ ರೀತಿ ಕ್ಷೇತ್ರ ಕಾರ್ಯವನ್ನು ಪ್ರಾನ್ಸಿಸ್ ಬುಕನಾನ್ 19ನೇ ಶತಮಾನದ ಆರಂಭದಲ್ಲಿಯೇ ಕರ್ನಾಟಕದಲ್ಲಿ ಕೈಗೊಂಡಿದ್ದನು. ಈತನ ಕ್ಷೇತ್ರ ಕಾರ್ಯದ ಹಲವು ಅಂಶಗಳು ಕಾಡುಗೊಲ್ಲರ ಸಾಂಸ್ಕೃತಿಕ ನಾಯಕರಾದ ಎತ್ತಪ್ಪ ಮತ್ತು ಜುಂಜಪ್ಪರ ಇತಿಹಾಸವನ್ನು ಅರಿಯಲು ಸಹಕಾರವಾಯಿತು ಎಂದು ತಿಳಿಸಿದರು.

ಫ್ರಾನ್ಸಿಸ್ ಬುಕನಾನ್ ಅವರ ತುಮಕೂರು ಜಿಲ್ಲೆಯ ಭೇಟಿಯ ದಾಖಲೆಯನ್ನು ಕನ್ನಡಕ್ಕೆ ತಂದಿರುವ ಲೇಖಕ ಎಂ.ಜಿ.ರಂಗಸ್ವಾಮಿ ಮಾತನಾಡಿ, ಬಿಳಿಯರು ಭಾರತಕ್ಕೆ ವ್ಯಾಪಾರಕ್ಕಾಗಿ, ಆಡಳಿತಕ್ಕಾಗಿ, ವಸಾಹತು ವಿಸ್ತರಣೆಗಾಗಿ ಮಾತ್ರ ಬಂದವರಲ್ಲ; ಬದಲಾಗಿ ಇಲ್ಲಿನ ಕಲೆ, ಸಾಹಿತ್ಯ, ಭಾಷೆ, ಸಂಸ್ಕೃತಿ, ಧರ್ಮಗಳ ಬಗೆಗೆ ಅಧ್ಯಯನ ನಡೆಸಿದ್ದರು. ಜನಜೀವನ ಸಾಮಾಜಿಕ ವ್ಯವಸ್ಥೆಯ ಬಗೆಗೆ ಕೂಡ ಅಭ್ಯಾಸ ಮಾಡಿದ್ದಾರೆ. ಕ್ರಿ.ಶ.1800 ನೇ ಇಸವಿಯಲ್ಲಿ 13 ದಿನಗಳ ಕಾಲ ಮಧುಗಿರಿ ತಾಲೂಕಿನಲ್ಲಿ ಸಂಚರಿಸಿದ್ದ ಬುಕಾನನ್ ಮಧುಗಿರಿಯನ್ನು ಸಿರಿಧಾನ್ಯದ ಕಣಜ ಎಂದು ಉಲ್ಲೇಖಿಸಿದ್ದನು. ನನ್ನ ಕಣ್ಣಿಗೆ ಏನೆಲ್ಲಾ ಜ್ಞಾನ ಸಿಗುತ್ತದೆಯೋ ಅದೆಲ್ಲವನ್ನು ಗ್ರಹಿಸಿಕೊಳ್ಳುವ ಮೂಲಕ ನಮ್ಮ ಪರಂಪರೆ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ವಿಸ್ತೃತವಾಗಿ ದಾಖಲೆ ಮಾಡಿದ್ದಾನೆ. ಮಧುಗಿರಿಯಲ್ಲಿ ಬೆಳೆಯುವ ರಾಗಿ ಬೆಳೆಯ ಕುರಿತು ಹತ್ತು ಪುಟಗಳಷ್ಟು ಮಾಹಿತಿ ನೀಡಿದ್ದಾನೆ. ಬುಕನಾನ್ ಆಗಿನ ಮೈಸೂರು ಸಂಸ್ಥಾನದಲ್ಲಿ ನಡೆಸಿದ ಅಧ್ಯಯನವೇ ಇಪ್ಪತ್ತನೇ ಶತಮಾನದ ಆರಂಭದಲ್ಲಿ ನಾಲ್ವಡಿ ಅವರ ಕಾಲದಲ್ಲಿ ನಡೆದ ಜಾತಿ ಸಮೀಕ್ಷೆಗೆ ಪ್ರೇರಣೆಯಾಗಿತ್ತು ಎಂದು ಅಭಿಪ್ರಾಯಪಟ್ಟರು.

ಇತಿಹಾಸ ವಿಭಾಗದ ಮುಖ್ಯಸ್ಥೆ ವೇದಲಕ್ಷ್ಮೀ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥ ಗೋವಿಂದರಾಯ ಮಾತನಾಡಿದರು. ಸಾಹಿತಿ ಕೆಪಿ ನಟರಾಜ್, ಸಹ ಪ್ರಾಧ್ಯಾಪಕರಾದ ಮಂಜುನಾಥ ಬುಡುಸನಹಳ್ಳಿ,ಮನೋಹರ್, ದರ್ಶನ್, ಮಂಜುನಾಥ್ ಪೂಜಾರಿ, ನಾಗಭೂಷಣ್, ವಿನುತ ಹಾಜರಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ತಾಲ್ಲೂಕು ಮಟ್ಟಕ್ಕೆ ಆಯ್ಕೆ

ಸೂರ್ಯಪ್ರಗತಿನ್ಯೂಸ್.ಕಾಂ



ವಿದ್ಯಾನಿಕೇತನ ಶಾಲೆಯ ವಿದ್ಯಾರ್ಥಿಗಳು 'ತುಮಕೂರು: ವಿದ್ಯಾರ್ಥಿಗಳು ತಮ್ಮ ಕ್ರೀಡಾ ಪ್ರತಿಭೆ, ಶಿಸ್ತು ಹಾಗೂ ಕಠಿಣ ಪರಿಶ್ರಮದ ಮೂಲಕ ಗಮನಾರ್ಹ ಸಾಧನೆ ಮಾಡಿದ್ದು, ಹಲವಾರು ವಿಭಾಗಗಳಲ್ಲಿ ತಾಲ್ಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ ಎಂದು ವಿದ್ಯಾನಿಕೇತನ ಶಿಕ್ಷಣ ಸಂಸ್ಥೆಯ ಚೆನ್ನಬಸವ ಪ್ರಸಾದ್‌ರವರು ತಿಳಿಸಿದರು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಹಾಗೂ ವಿದ್ಯಾನಿಕೇತನ ಶಾಲೆಯ ಇವರುಗಳ ಸಹಯೋಗದೊಂದಿಗೆ ವಿದ್ಯಾರ್ಥಿಗಳು ಸೆ.8 ಮತ್ತು 9 ರಂದು ಎರಡು ದಿನಗಳ ನಡೆದ ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ವಿವಿಧ ಕ್ರೀಡಾ ವಿಭಾಗಗಳಲ್ಲಿ ಭಾಗವಹಿಸಿ ಅತ್ಯುತ್ತಮ ಪ್ರದರ್ಶನವನ್ನು ನೀಡಿದರು. ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ತಮ್ಮ ಪ್ರತಿಭೆ ಹಾಗೂ ಉತ್ತಮ ಪ್ರದರ್ಶನದ ಮೂಲಕ ಗಮನ ಸೆಳೆದ ಅವರು, ತಾಲ್ಲೂಕು ಮಟ್ಟದಲ್ಲಿಯೂ ಉತ್ತಮ ಸಾಧನೆ ಮಾಡುವ ವಿಶ್ವಾಸವನ್ನು ವ್ಯಕ್ತಪಡಿಸಿದರು.

ಬಾಲಕಯರ ವಿಭಾಗದಲ್ಲಿ: ಷಟಲ್ ಬ್ಯಾಡ್ಮಿಂಟನ್- ವೈಯಕ್ತಿಕ ವಿಭಾಗದಲ್ಲಿ ವಾಲಿಬಾಲ್, ಖೋ-ಖೋ, 4ಥ100 ಮೀಟರ್ ರಿಲೇ, 200 ಮೀಟರ್ ಓಟದಲ್ಲಿ ಪ್ರಥಮ ಸ್ಥಾನ, 400 ಮೀಟರ್ ಓಟದಲ್ಲಿ ದ್ವಿತೀಯ ಸ್ಥಾನ, ಎತ್ತರ ಜಿಗಿತದಲ್ಲಿ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ಬಾಲಕಿಯರ ವಿಭಾಗದಲ್ಲಿ : ಷಟಲ್ ಬ್ಯಾಡ್ಮಿಂಟನ್‌ದಲ್ಲಿ 200 ಮೀಟರ್ ಓಟದಲ್ಲಿ ದ್ವಿತೀಯ ಸ್ಥಾನವನ್ನು ಪಡೆದುಕೊಂಡರು. ಕಾರ್ಯಕ್ರಮದಲ್ಲಿ ಜಂಟಿ ಕಾರ್ಯದರ್ಶಿ ಡಾ.ಸಾಯಿ ಪ್ರಸಾದ್, ಉಪಾಧ್ಯಕ್ಷರಾದ ಸುರೇಶ್.ಜಿ.ಆರ್. ಶೈಕ್ಷಣಿಕ ಸಂಯೋಜಕರಾದ ಮಿಥಿಲಾ, ಮುಖ್ಯೋಪಾಧ್ಯಾಯಿನಿ ರಾಜಲಕ್ಷ್ಮಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳ ಈ ಸಾಧನೆಗೆ ಶಾಲೆಯ ಆಡಳಿತ ಮಂಡಳಿ, ಮುಖ್ಯೋಪಾಧ್ಯಾಯರು, ದೈಹಿಕ ಶಿಕ್ಷಣ ಶಿಕ್ಷಕರು ಹಾಗೂ ಶಿಕ್ಷಕ ವೃಂದ ಅಭಿನಂದನೆ ಸಲ್ಲಿಸಿದ್ದು, ತಾಲ್ಲೂಕು ಮಟ್ಟದ ಸ್ಪರ್ಧೆಯಲ್ಲಿಯೂ ಉತ್ತಮ ಪ್ರದರ್ಶನ ನೀಡಿ ಶಾಲೆಗೆ ಕೀರ್ತಿ ತರಲಿ ಎಂದು ಶುಭ ಹಾರೈಸಿದ್ದಾರೆ.

100 ತಾಲೂಕುಗಳಲ್ಲಿ ಬರಗಾಲವನ್ನು ಘೋಷಿಸಲಾಗಿದೆ

ಸೂರ್ಯಪ್ರಗತಿನ್ಯೂಸ್.ಕಾಂ

ಮುಂದಿನ ದಿನಗಳಲ್ಲಿ ರಾಜ್ಯ ತೀವ್ರ ಬರಗಾಲ, ನೀರು ಮತ್ತು ವಿದ್ಯುತ್ ಕೊರತೆ ಎದುರಿಸಲಿದೆ: ಮುಖ್ಯಮಂತ್ರಿ ಡಿಕೆ ಶಿವಕುಮಾರ್

ರಾಮನಗರ: ರಾಜ್ಯದಲ್ಲಿ ತೀವ್ರ ಬರಗಾಲದ ಪರಿಸ್ಥಿತಿ ಹಾಗೂ ಕುಡಿಯುವ ನೀರು ಮತ್ತು ವಿದ್ಯುತ್‌ಗೆ ಮುಂಬರುವ ದಿನಗಳಲ್ಲಿ ಉಂಟಾಗಬಹುದಾದ ಕೊರತೆಯ ಬಗ್ಗೆ ಕರ್ನಾಟಕದ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಸೋಮವಾರ ಕಳವಳ ವ್ಯಕ್ತಪಡಿಸಿದ್ದು, ಉಷ್ಣ ವಿದ್ಯುತ್ ಉತ್ಪಾದನೆ ಹೆಚ್ಚಿಸಲು ಮತ್ತು ರಾಷ್ಟ್ರೀಯ ಗ್ರಿಡ್ ಮೂಲಕ ಹೆಚ್ಚುವರಿ ವಿದ್ಯುತ್ ಪಡೆಯಲು ಸರ್ಕಾರವು ವಿವಿಧ ಮಾರ್ಗಗಳನ್ನು ಪರಿಶೀಲಿಸುತ್ತಿದೆ ಎಂದು ಅವರು ತಿಳಿಸಿದರು.

ಕನಕಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ 100 ತಾಲೂಕುಗಳಲ್ಲಿ ಬರಗಾಲವನ್ನು ಘೋಷಿಸಲಾಗಿದೆ ಮತ್ತು ನಿಗದಿತ ಮಾನದಂಡಗಳ ಆಧಾರದ ಮೇಲೆ ಇತರ ಪ್ರದೇಶಗಳನ್ನು ಬರಪೀಡಿತ ಎಂದು ಘೋಷಿಸುವ ಪ್ರಕ್ರಿಯೆ ನಡೆಯುತ್ತಿದೆ ಎಂದು ಹೇಳಿದರು

'ಈ ವರ್ಷ ಅಂತರ್ಜಲ ಮಟ್ಟವು ತೀವ್ರವಾಗಿ ಕುಸಿದಿದೆ ಮತ್ತು ಬೆಳೆಗಳು ನಾಶವಾಗಿವೆ. ಅನೇಕ ಕಡೆಗಳಲ್ಲಿ ಬೆಳೆಗಳನ್ನು ಬೆಳೆಯಲು ಕೂಡ ಸಾಧ್ಯವಾಗಿಲ್ಲ. ಮುಂದಿನ ದಿನಗಳಲ್ಲಿ ಕುಡಿಯುವ ನೀರು ಮತ್ತು ವಿದ್ಯುತ್‌ಗೆ ತೀವ್ರ ಕೊರತೆ ಉಂಟಾಗುವ ಸಾಧ್ಯತೆಯಿದೆ ಎಂದು ಪರಿಸ್ಥಿತಿಯು ಸೂಚಿಸುತ್ತಿದೆ' ಎಂದು ಅವರು ಹೇಳಿದರು.

ಕಳೆದ ವಾರ ವಿದ್ಯುತ್ ಬೇಡಿಕೆಯು 19,000 ಮೆಗಾವ್ಯಾಟ್ (ಒಫ) ಗಡಿ ದಾಟಿದ್ದು, ಇದರಿಂದಾಗಿ ಸಂಜೆಯ ಗರಿಷ್ಠ ಬಳಕೆಯ ಅವಧಿಯಲ್ಲಿ ಪ್ರತಿ ಯೂನಿಟ್‌ಗೆ 11 ರಿಂದ 13 ರೂಪಾಯಿಗಳ ದರದಲ್ಲಿ ವಿದ್ಯುತ್ ಖರೀದಿಸಬೇಕಾದ ಅನಿವಾರ್ಯತೆ ಸರ್ಕಾರಕ್ಕೆ ಎದುರಾಯಿತು ಎಂದು ತಿಳಿಸಿದರು.

'ಈ ವಿಷಯದ ಕುರಿತು ವಿಸ್ತೃತವಾಗಿ ಚರ್ಚಿಸಲು ಹಾಗೂ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ನೆರೆಯ ರಾಜ್ಯಗಳೊಂದಿಗೆ ಮಾತುಕತೆ ನಡೆಸಲು ನಾನು ನಮ್ಮ ಇಂಧನ ಸಚಿವ ಕೆಜೆ ಜಾರ್ಜ್ ಅವರಿಗೆ ಸೂಚಿಸಿದ್ದೇನೆ. ಹೂಡಿಕೆದಾರರಿಂದ ನೀರು, ವಿದ್ಯುತ್ ಮತ್ತು ಭೂಮಿಗೆ ಬೇಡಿಕೆ ಹೆಚ್ಚುತ್ತಿರುವುದನ್ನು ಕರ್ನಾಟಕವು ಕಾಣುತ್ತಿದೆ' ಎಂದು ಶಿವಕುಮಾರ್ ತಿಳಿಸಿದರು.

ಉಷ್ಣ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವ ಹಾಗೂ ಕಲ್ಲಿದ್ದಲು ಉತ್ಪಾದಿಸುವ ಪ್ರದೇಶಗಳಿಂದ ವಿದ್ಯುತ್ ಪಡೆಯುವ ಕುರಿತು ಸರ್ಕಾರ ಪರಿಶೀಲಿಸಲಿದೆ. ಒಂದು ರಾಷ್ಟ್ರ, ಒಂದು ಗ್ರಿಡ್') ವ್ಯವಸ್ಥೆಯಡಿ, ದೇಶದ ಇತರ ಭಾಗಗಳಲ್ಲಿ ಉತ್ಪಾದನೆಯಾಗುವ ವಿದ್ಯುತ್ ಅನ್ನು ಕರ್ನಾಟಕಕ್ಕೆ ತರಲು ಸಾಧ್ಯವಾಗುತ್ತದೆ; ಆದರೆ ಇದಕ್ಕಾಗಿ ಪ್ರಸರಣ ಶುಲ್ಕಗಳು ಅನ್ವಯವಾಗುತ್ತವೆ ಎಂದರು.

ಬರಗಾಲದಿಂದ ಉಂಟಾದ ನಷ್ಟಗಳ ಕುರಿತು ಮಾತನಾಡಿದ ಶಿವಕುಮಾರ್, ಸೆಪ್ಟೆಂಬರ್ 21 ರಿಂದ 23 ರವರೆಗೆ ನಿಗದಿಯಾಗಿರುವ ಶಾಸಕಾಂಗದ ವಿಶೇಷ ಅಧಿವೇಶನದಲ್ಲಿ, ಬರಗಾಲದಿಂದ ರೈತರಿಗಾದ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸರ್ಕಾರ ಎರಡು ದಿನಗಳನ್ನು ಮೀಸಲಿಟ್ಟಿದೆ ಎಂದು ತಿಳಿಸಿದರು.



'ಬರಗಾಲದಿಂದ ರೈತರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ನಾವು ಚರ್ಚಿಸಲು ಬಯಸುತ್ತೇವೆ. ಅದಕ್ಕಾಗಿಯೇ ರೈತರು ಎದುರಿಸುತ್ತಿರುವ ಬರ ಪರಿಸ್ಥಿತಿಯ ಬಗ್ಗೆ ಚರ್ಚಿಸಲು ನಿರ್ದಿಷ್ಟವಾಗಿ ಎರಡು ದಿನಗಳನ್ನು ಮೀಸಲಿಟ್ಟಿದ್ದೇವೆ. ವಿವಿಧ ಪಕ್ಷಗಳ ಶಾಸಕರು ತಮ್ಮ ಅಹವಾಲುಗಳನ್ನು ವ್ಯಕ್ತಪಡಿಸಿದ್ದಾರೆ ಮತ್ತು ಅಧಿವೇಶನದ ಸಂದರ್ಭದಲ್ಲಿ ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಪ್ರಸ್ತಾಪಿಸಲು ಅವರಿಗೆ ಅವಕಾಶವಿರುತ್ತದೆ' ಎಂದು ಅವರು ಹೇಳಿದರು.

'ಈ ವಿಷಯದಲ್ಲಿ ನಾವು ಪಕ್ಷ ರಾಜಕೀಯವನ್ನು ಪರಿಗಣಿಸುವುದಿಲ್ಲ. ಎಲ್ಲಿ ಬರಗಾಲ ತೀವ್ರವಾಗಿದೆಯೋ ಮತ್ತು ನಿಗದಿತ ಮಾನದಂಡಗಳು ಪೂರೈಸಲ್ಪಡುತ್ತವೆಯೋ, ಅಂತಹ ಪ್ರದೇಶಗಳನ್ನು ಶೀಘ್ರದಲ್ಲೇ ಬರಪೀಡಿತ ಪ್ರದೇಶಗಳೆಂದು ಘೋಷಿಸುತ್ತೇವೆ' ಎಂದು ಅವರು ಹೇಳಿದರು.

ವಲಸೆ ತಡೆಗಟ್ಟುವ ಹಾಗೂ ಜನರ ಜೀವನಮಟ್ಟ ಸುಧಾರಿಸಲು ಆ ಪ್ರದೇಶದ ಸಂಪನ್ಮೂಲಗಳನ್ನು ಬಳಸಿಕೊಳ್ಳುವತ್ತ ಗಮನಹರಿಸಿ, ಸೆಪ್ಟೆಂಬರ್ 18 ರಂದು ಕರಾವಳಿ ಭಾಗದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಾಜ್ಯ ಸಚಿವ ಸಂಪುಟವು ತನ್ನ ಮೊದಲ ಸಭೆಯನ್ನು ನಡೆಸಲಿದೆ. ಅಂದು ನಾವು ಹಲವಾರು ಕಾರ್ಯಕ್ರಮಗಳು ಮತ್ತು ಹೊಸ ಉಪಕ್ರಮಗಳನ್ನು ಘೋಷಿಸಲಿದ್ದೇವೆ ಎಂದು ಮುಖ್ಯಮಂತ್ರಿ ತಿಳಿಸಿದರು.

ತಮ್ಮ ಸ್ವಕ್ಷೇತ್ರಕ್ಕೆ ಭೇಟಿ ನೀಡಿದ ಕುರಿತು ಮಾತನಾಡಿದ ಶಿವಕುಮಾರ್, ತಾವು ಹಾಸ್ಟೆಲ್‌ವೊಂದಕ್ಕೆ ಭೇಟಿ ನೀಡಿ, ವಿದ್ಯಾರ್ಥಿಗಳ ಕಲ್ಯಾಣದ ಕುರಿತು ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದ್ದಾಗಿ ತಿಳಿಸಿದರು.

'ಕಲಬುರಗಿ, ರಾಯಚೂರು, ಹಾವೇರಿ ಮತ್ತು ಬೀದರ್‌ನ ವಿದ್ಯಾರ್ಥಿಗಳು ತಮ್ಮ ಶಿಕ್ಷಣಕ್ಕಾಗಿ ಕನಕಪುರದ ಹಾಸ್ಟೆಲ್‌ಗಳಲ್ಲಿ ಉಳಿದುಕೊಂಡಿದ್ದರು, ಆದರೆ ಹಬ್ಬದ ಕಾರಣಕ್ಕಾಗಿ ಅವರಲ್ಲಿ ಅನೇಕರು ಮನೆಗೆ ತೆರಳಿದ್ದರು. ಮಕ್ಕಳ ಶಿಕ್ಷಣವು ಹೇಗೆ ಸಾಗುತ್ತಿದೆ, ವಾರ್ಡನ್‌ಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿದ್ದಾರೆಯೇ ಮತ್ತು ಮಕ್ಕಳು ಯಾವುದಾದರೂ ತಪ್ಪು ದಾರಿಯತ್ತ ಸಾಗುತ್ತಿದ್ದಾರೆಯೇ ಎಂಬುದರ ಮೇಲೆ ನಾವು ನಿಗಾ ವಹಿಸಬೇಕಾಗಿದೆ' ಎಂದು ಹೇಳಿದರು.

ಪೋಷಕರು ತಮ್ಮ ಮಕ್ಕಳನ್ನು ಹೇಗೆ ಇತರ ಪೋಷಕರ ವಶಕ್ಕೆ ಒಪ್ಪಿಸಿ ನಂಬಿಕೆ ಇಡುತ್ತಾರೋ, ಹಾಗೆಯೇ ನಮ್ಮ (ಸರ್ಕಾರದ) ವಶಕ್ಕೆ ಒಪ್ಪಿಸಿ ಸರ್ಕಾರದ ಮೇಲೆ ನಂಬಿಕೆ ಇಡುತ್ತಾರೆ. ಈ ಜವಾಬ್ದಾರಿಯ ಬಗ್ಗೆ ನಾವು ಯೋಚಿಸಬೇಕಿದೆ ಎಂದು ಅವರು ಹೇಳಿದರು.

ಸರ್ಕಾರದ 'ಪ್ರಜಾ ಸೇವಾ' ಕಾರ್ಯಕ್ರಮದಲ್ಲಿ ಕಾಂಗ್ರೆಸ್‌ನ ಎಲ್ಲ ಶಾಸಕರು ಭಾಗವಹಿಸುತ್ತಾರೆಯೇ ಎಂದು ಕೇಳಿದಾಗ, ಅವರು ಭಾಗವಹಿಸುವುದಾಗಿ ತಿಳಿಸಿದರು; ಜೊತೆಗೆ, ಕೆಲವರಿಗೆ ಈ ಕಾರ್ಯಕ್ರಮ ಮತ್ತು ಇಲಾಖೆಯ ಬಗ್ಗೆ ಮಾಹಿತಿ ನೀಡುವ ಅಗತ್ಯವಿದೆ. ಆಡಳಿತವನ್ನು ಜನರಿಗೆ ಹತ್ತಿರವಾಗಿಸುವುದು, ಸಾರ್ವಜನಿಕರ ಕುಂದುಕೊರತೆಗಳನ್ನು ಬಗೆಹರಿಸುವುದು ಮತ್ತು ಸರ್ಕಾರಿ ಯೋಜನೆಗಳನ್ನು ಸಕಾಲದಲ್ಲಿ ತಲುಪಿಸುವುದನ್ನು ಖಚಿತಪಡಿಸಿಕೊಳ್ಳುವುದು ಈ ಉಪಕ್ರಮದ ಉದ್ದೇಶವಾಗಿದೆ ಎಂದೂ ಹೇಳಿದರು.

'ಉಳಿದ ಖಾಲಿ ಸಚಿವ ಸ್ಥಾನಗಳನ್ನು ಯಾವಾಗ ಭರ್ತಿ ಮಾಡಲಾಗುವುದು ಎಂದು ಕೇಳಿದಾಗ, ಪಕ್ಷವು ಸರ್ಕಾರಕ್ಕೆ ಆ ಕುರಿತು ನಿರ್ದೇಶನ ನೀಡಿದ ನಂತರವೇ ಆ ನಿರ್ಧಾರವನ್ನು ತೆಗೆದುಕೊಳ್ಳಲಾಗುವುದು. ನಮ್ಮ ಪಕ್ಷವು (ಕಾಂಗ್ರೆಸ್) ಯಾವಾಗ ಸೂಚಿಸುತ್ತದೆಯೋ, ಆಗ ನಾವು ಅದನ್ನು ಮಾಡುತ್ತೇವೆ' ಎಂದು

ಕರ್ನಾಟಕ ರಾಜ್ಯ ಕೌಶಲ್ಯ ಒಲಂಪಿಕ್ಸ್ 2026-27: ಸೆಪ್ಟೆಂಬರ್ 15 ನೋಂದಣಿಗೆ ಕೊನೆಯ ದಿನ



ಸೂರ್ಯಪ್ರಗತಿನ್ಯೂಸ್.ಕಾಂ

ಭಾರತ ಸರ್ಕಾರದ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಮಂತ್ರಾಲಯ ಹಾಗೂ ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ 'ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ' (KSDC) ಜಂಟಿಯಾಗಿ ರಾಜ್ಯದ ಯುವಜನರಲ್ಲಿರುವ ವೃತ್ತಿಪರ ಕೌಶಲ್ಯಗಳನ್ನು ಪ್ರದರ್ಶಿಸಲು "ಕರ್ನಾಟಕ ರಾಜ್ಯ ಕೌಶಲ್ಯ ಒಲಂಪಿಕ್ಸ್ (India Skills Competition 2026-27)" ಅನ್ನು ಆಯೋಜಿಸುತ್ತಿವೆ.

ಈ ಸ್ಪರ್ಧೆಯು ಜಿಲ್ಲಾ, ವಲಯ ಮತ್ತು ರಾಜ್ಯ ಮಟ್ಟಗಳಲ್ಲಿ ನಡೆಯಲಿದ್ದು, ಯುವಜನರಿಗೆ ಸೂಕ್ತ ತರಬೇತಿ, ಮಾರ್ಗದರ್ಶನ ಹಾಗೂ ರಾಷ್ಟ್ರೀಯ-ಅಂತರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲು ಅಪೂರ್ವ ಅವಕಾಶ ಕಲ್ಪಿಸಲಿದೆ.

ಜಾಗತಿಕ ವೇದಿಕೆಯಲ್ಲಿ ಕರ್ನಾಟಕದ ಹೆಜ್ಜೆ ಗುರುತು: 2026ರ ಸೆಪ್ಟೆಂಬರ್‌ನಲ್ಲಿ ಚೀನಾದ ಶಾಂಘೈನಲ್ಲಿ ನಡೆಯಲಿರುವ ವಿಶ್ವ ಕೌಶಲ್ಯ ಸ್ಪರ್ಧೆಯಲ್ಲಿ ಕರ್ನಾಟಕದಿಂದ 16 ಅಭ್ಯರ್ಥಿಗಳು ಭಾರತವನ್ನು ಪ್ರತಿನಿಧಿಸುತ್ತಿದ್ದು, ಇದು ರಾಜ್ಯಕ್ಕೆ ಹೆಮ್ಮೆಯ ವಿಷಯವಾಗಿದೆ.

ಮುಂಬರುವ 2028ರ ವಿಶ್ವ ಕೌಶಲ್ಯ ಸ್ಪರ್ಧೆಯು ಜಪಾನ್ ದೇಶದ ಐಚಿ (ಯಛಿಖ) ಯಲ್ಲಿ ನಡೆಯಲಿದ್ದು, ಅದಕ್ಕಾಗಿ ಈಗಿನಿಂದಲೇ ರಾಜ್ಯದ ಪ್ರತಿಭಾವಂತ ಯುವಜನರನ್ನು ಸಜ್ಜುಗೊಳಿಸಲು ಕೌಶಲ್ಯ ಒಲಂಪಿಕ್ಸ್ ಯೋಜಿಸಲಾಗಿದೆ.

ವಿವಿಧ ಕಾಲೇಜುಗಳು, ತಾಂತ್ರಿಕ ಹಾಗೂ ಶಿಕ್ಷಣ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು/ಯುವಜನರು ಭಾಗವಹಿಸಬಹುದಾಗಿದೆ ಆಸಕ್ತ ಅಭ್ಯರ್ಥಿಗಳು 'ಸ್ಕಿಲ್ ಇಂಡಿಯಾ ಡಿಜಿಟಲ್ ಹಬ್' ವೆಬ್‌ಸೈಟ್ www.skillindiadigital.gov.in ಮೂಲಕ 2026 ನೇ ಸೆಪ್ಟೆಂಬರ್ 15 ರ ಒಳಗಾಗಿ ನೋಂದಾಯಿಸಿಕೊಳ್ಳುವುದು. ಹೆಚ್ಚಿನ ಮಾಹಿತಿಗಾಗಿ ಶ್ರೀ ಪ್ರಾಣೇಶ್, ಉಪ ಪ್ರಧಾನ ವ್ಯವಸ್ಥಾಪಕರು, ಕೆ.ಎಸ್.ಡಿ.ಸಿ (KSDC), ಬೆಂಗಳೂರು, ಮೊಬೈಲ್ ದೂರವಾಣಿ ಸಂಖ್ಯೆ 9686409096 ಅಥವಾ ಇ-ಮೇಲ್: indiaskillskar@gmail.com ಗೆ ಸಂಪರ್ಕಿಸುವಂತೆ ಕೌಶಲ್ಯಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಸುಬೋಧ್ ಯಾದವ್ ಅವರು ತಿಳಿಸಿದ್ದಾರೆ.

ಬದಲಿ ಕೃಷಿ ಕ್ರಾಂತಿ: "ದೃಢ ಕರ್ನಾಟಕ ಸಂಕಲ್ಪ" ದಡಿ ಸಾಗುತ್ತಿದೆ ಪ್ರಗತಿಯ ರಥ

ಸೂರ್ಯಪ್ರಗತಿನ್ಯೂಸ್.ಕಾಂ

"ಉಳುವ ಯೋಗಿಯ ನೋಡಲ್ಲಿ" ಎಂಬ ಮಾತಿನಂತೆ ರೈತ ದೇಶದ ಬೆನ್ನೆಲುಬು. ಮಾನವಕುಲಕ್ಕೆ ಅನ್ನ ನೀಡುವ ರೈತ ಕೇವಲ ಜೀವನಾಧಾರವಲ್ಲ, ಇಡೀ ದೇಶದ ಆರ್ಥಿಕತೆಯ ಮೂಲಸ್ತಂಭ. ಪ್ರತಿಯೊಬ್ಬ ಮನುಷ್ಯನ ದೈನಂದಿನ ಆಹಾರದ ಅಗತ್ಯವನ್ನು ಪೂರೈಸುವಲ್ಲಿ ರೈತರ ಪಾತ್ರ ಅಪಾರವಾದದ್ದು. ಆರ್ಥಿಕತೆ ಮತ್ತು ಸಮಾಜದಲ್ಲಿ ರೈತನ ಪಾತ್ರ ಬಹಳ ಪ್ರಾಮುಖ್ಯವಾಗಿದೆ. ದೇಶದ ಕೋಟ್ಯಂತರ ಜನರಿಗೆ ದಿನನಿತ್ಯದ ಆಹಾರ ಧಾನ್ಯಗಳನ್ನು ಉತ್ಪಾದಿಸಿ ಆಹಾರ ಭದ್ರತೆ ಒದಗಿಸುತ್ತಾನೆ. ಜಿಡಿಪಿಗೆ (GDP) ಗಣನೀಯ ಕೊಡುಗೆ ನೀಡುವುದರ ಜೊತೆಗೆ, ಕೈಗಾರಿಕೆಗಳಿಗೆ ಅಗತ್ಯವಿರುವ ಕಚ್ಚಾ ವಸ್ತುಗಳನ್ನು (ಉದಾ: ಹತ್ತಿ, ಕಬ್ಬು) ಒದಗಿಸುತ್ತಾನೆ. ಗ್ರಾಮೀಣ ಭಾರತದಲ್ಲಿ ಶೇಕಡಾ 50 ಕ್ಕಿಂತ ಹೆಚ್ಚು ಜನರಿಗೆ ಕೃಷಿ ಕ್ಷೇತ್ರವೇ ಪ್ರಮುಖ ಉದ್ಯೋಗ ಮೂಲವಾಗಿದೆ.

ರೈತನ ಬದುಕಿಗೆ ಭೂಮಿ ಬುನಾದಿಯಾದರೆ, ನೀರು ಅವನ ಬೆಳೆಯ ಜೀವರಸ. ಜನಸಂಖ್ಯಾ ಸ್ಫೋಟದಿಂದಾಗಿ ಆಹಾರ ಪೂರೈಕೆಯಲ್ಲಿ ಏರುಪೇರು ಉಂಟಾದಾಗ, ಕೃಷಿಗೆ ಆಧುನಿಕ ತಂತ್ರಜ್ಞಾನದ ಸ್ಪರ್ಶ ನೀಡುವುದು ಅತ್ಯಗತ್ಯವಾಯಿತು. ಈ ನಿಟ್ಟಿನಲ್ಲಿ ಕೃಷಿ ತಂತ್ರಜ್ಞಾನ, ನೀರಿನ ಸಮರ್ಥ ನಿರ್ವಹಣೆ ಹಾಗೂ ಆಧುನಿಕ ಯಂತ್ರೋಪಕರಣಗಳ ಬಳಕೆಯ ಮೂಲಕ ರೈತರ ಶ್ರಮಕ್ಕೆ ತಕ್ಕ ಬೆಲೆ ಸಿಗುವಂತೆ ಮಾಡಲು ಹಲವು ರೈತಪರ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

ರಾಜ್ಯದಲ್ಲಿ ಸರ್ಕಾರ 100 ದಿನಗಳನ್ನು ಯಶಸ್ವಿಯಾಗಿ ಪೂರೈಸಿದ ಐತಿಹಾಸಿಕ ಸಂದರ್ಭದಲ್ಲಿ, ಸೆಪ್ಟೆಂಬರ್ 10 ರಂದು ಆಯೋಜಿಸಲಾದ "ದೃಢ ಕರ್ನಾಟಕದ ಸಂಕಲ್ಪ - ಶತಕದ ಪಥ, ಪ್ರಗತಿಯ ರಥ" ಕಾರ್ಯಕ್ರಮದಲ್ಲಿ ಸನ್ಮಾನ್ಯ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ಸರ್ಕಾರವು ರಾಜ್ಯದ ಕೃಷಿ ಕ್ಷೇತ್ರಕ್ಕೆ ನೂತನ ಚೈತನ್ಯ ತುಂಬಲು ಹಾಗೂ ರೈತರ ಜೀವನಮಟ್ಟವನ್ನು ಸುಧಾರಿಸಲು ಹಲವು ಮಹತ್ವಾಕಾಂಕ್ಷಿ ಯೋಜನೆಗಳನ್ನು ನಾಡಿಗೆ ಸಮರ್ಪಿಸಿದ್ದಾರೆ. ಅನ್ನದಾತನ ಸಬಲೀಕರಣಕ್ಕೆ 'ಶತಕದ ಪಥ'ದ ಪ್ರಮುಖ



ಕೃಷಿ ಕೊಡುಗೆಗಳು

ಶೂನ್ಯ ಮತ್ತು ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯ*: ಪ್ರಸಕ್ತ ವರ್ಷದಲ್ಲಿ ರಾಜ್ಯದ ಒಟ್ಟು 28.63 ಲಕ್ಷ ರೈತರಿಗೆ ಶೂನ್ಯ ಹಾಗೂ ತೀರ ಕಡಿಮೆ ಬಡ್ಡಿದರದಲ್ಲಿ ಕೃಷಿ ಸಾಲವನ್ನು ಒದಗಿಸಲು ರೂ. 25,652 ಕೋಟಿ ಅನುದಾನವನ್ನು ಕಾಯ್ದಿರಿಸಲಾಗಿದೆ.

ನೀರಾವರಿ ಯೋಜನೆಗಳಿಗೆ ಆಸರೆ*: 'ಅನ್ನ ನೀಡುವ ಭೂಮಿಗೆ ನೀರಿನ ಆಸರೆ' ನೀಡುವ ಉದ್ದೇಶದಿಂದ ಒಟ್ಟು 121 ನೀರಾವರಿ ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇದಕ್ಕಾಗಿ ರೂ. 17,073 ಕೋಟಿ ಹಣವನ್ನು ಮೀಸಲಿಡಲಾಗಿದೆ.

ಕರ್ನಾಟಕ ಸರ್ಕಾರದ *"ಅವಕಾಶಗಳ ಹೆದ್ದಾರಿ"* ಯೋಜನೆಯಡಿ ಗ್ರಾಮೀಣಾಭಿವೃದ್ಧಿ ಹಾಗೂ ಕೃಷಿ ಕ್ಷೇತ್ರದ ಸಮಗ್ರ ಪ್ರಗತಿಗಾಗಿ ಹಲವಾರು ಹೊಸ ಯೋಜನೆಗಳನ್ನು ರೂಪಿಸಲಾಗಿದೆ. ಕೃಷಿಯನ್ನು ಬರೀಜೀವನೋಪಾಯವನ್ನಾಗಿ ನೋಡದೆ, ಅದನ್ನು ತಂತ್ರಜ್ಞಾನ ಆಧಾರಿತ ಮತ್ತು ಸುಸ್ಥಿರ ಆದಾಯ ತರುವ ಉದ್ಯಮವನ್ನಾಗಿ ಪರಿವರ್ತಿಸುವುದು ಈ ನೀತಿಗಳ ಮೂಲ ಉದ್ದೇಶವಾಗಿದೆ. ಸರ್ಕಾರದ ಹೊಸ ಕೃಷಿ ನೀತಿಗಳು, ತಂತ್ರಜ್ಞಾನ ಮತ್ತು ಗ್ರಾಮೀಣ ಜೀವನದ ಸಮ್ಮಿಲನವನ್ನು ಪರಿಚಯಿಸುವ ಪ್ರಮುಖ ಯೋಜನೆಗಳ ವಿವರಣೆ ಇಲ್ಲಿದೆ.

ಮುಖ್ಯಮಂತ್ರಿ ನೇಗಿಲ ಯೋಗಿ ಯೋಜನೆ - ಯಂತ್ರೋಪಕರಣಗಳ ಬಾಡಿಗೆ ಗೆ ಶೇ. 50 ರಷ್ಟು ಸಹಾಯಧನ: 3 ಎಕರೆವರೆಗೆ ಜಮೀನು ಹೊಂದಿರುವ ಸಣ್ಣ ಮತ್ತು ಮಧ್ಯಮ ರೈತರಿಗೆ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆಗೆ ಪಡೆಯಲು ವಾರ್ಷಿಕ ಗರಿಷ್ಠ ರೂ. 4,500 ರವರೆಗೆ ಸಹಾಯಧನ ದೊರೆಯಲಿದೆ.

ಡಿಜಿಟಲ್ ಬುಕಿಂಗ್: ರೈತರು ತಮ್ಮ ಮೊಬೈಲ್ ಮೂಲಕವೇ ಅಗತ್ಯ ಯಂತ್ರಗಳನ್ನು ನೇರವಾಗಿ ಕಾಯ್ದಿರಿಸುವ ಸೌಲಭ್ಯ ಕಲ್ಪಿಸಲಾಗಿದ್ದು, ಇದರಿಂದ ಸಮಯ, ಶ್ರಮ ಮತ್ತು ವೆಚ್ಚ ಉಳಿತಾಯವಾಗಲಿದೆ.

ಸಿಎಂ ರೈತ ಚೈತನ್ಯ - ಡಿಜಿಟಲ್ ಕೃಷಿ ಮಿಷನ್ & ತಂತ್ರಜ್ಞಾನ ಅಭಿಯಾನ - ಡ್ರೋನ್ ಮತ್ತು ಉಪಗ್ರಹ ತಂತ್ರಜ್ಞಾನ: ಆಧುನಿಕ ಡ್ರೋನ್ ಹಾಗೂ ಉಪಗ್ರಹ ಆಧಾರಿತ ಬೆಳೆ ಸಮೀಕ್ಷೆ ನಡೆಸಿ ಬೆಳೆಗಳ ವಿಸ್ತೀರ್ಣ, ಬೆಳವಣಿಗೆ ಹಾಗೂ ಕೀಟಬಾಧೆಯ ನಿಖರ ಮಾಹಿತಿಯನ್ನು ರೈತರಿಗೆ ಸಕಾಲದಲ್ಲಿ ನೀಡಲಾಗುತ್ತದೆ. ಮಾರುಕಟ್ಟೆ ದರಗಳ ನೇರ ಮಾಹಿತಿ*: ಮಾರುಕಟ್ಟೆಯಲ್ಲಿನ ನವೀಕರಿಸಿದ ದರಗಳ ಕುರಿತು ಮಾಹಿತಿ ಒದಗಿಸುವುದರಿಂದ ರೈತರು ಬೆಳೆಗಳನ್ನು ಯಾವ ಮಾರುಕಟ್ಟೆಯಲ್ಲಿ ಮತ್ತು ಯಾವ ಸಮಯದಲ್ಲಿ ಮಾರಾಟ ಮಾಡಬೇಕೆಂದು ಸಕಾಲದಲ್ಲಿ ನಿರ್ಧಾರ ಕೈಗೊಳ್ಳಬಹುದು.

ಸಮಗ್ರ ಮಳೆಯಾಶ್ರಿತ ಹಾಗೂ ಶುಷ್ಕ ಪ್ರದೇಶಗಳ ಕೃಷಿ ನೀತಿ - ಶುಷ್ಕ ಭೂಮಿಗೆ ಸುಸ್ಥಿರ ಬಲ : ರಾಜಸ್ಥಾನದ ನಂತರ ದೇಶದಲ್ಲೇ ಎರಡನೇ ಅತಿ ದೊಡ್ಡ ಒಣಭೂಮಿ ಹೊಂದಿರುವ ಕರ್ನಾಟಕದಲ್ಲಿ ಜಲಸಂರಕ್ಷಣೆ, ಮಣ್ಣಿನ ಸಾವಯವ ಇಂಗಾಲದ ಮರುಸ್ಥಾಪನೆ ಮತ್ತು ಹವಾಮಾನ ಸ್ನೇಹಿ ಕೃಷಿಗೆ ಒತ್ತು ನೀಡಲಾಗುತ್ತಿದೆ.

ಆದಾಯ ಹೆಗ್ಗಳಿಕೆಗೆ ಮಾರ್ಗ: ಪಶುಸಂಗೋಪನೆ ಹಾಗೂ ವೃಕ್ಷ ಆಧಾರಿತ ಕೃಷಿಯನ್ನು ಉತ್ತೇಜಿಸುವ ಮೂಲಕ ಮಳೆಯಾಶ್ರಿತ ರೈತರಿಗೆ ಪೂರಕ ಆದಾಯ ಸೃಷ್ಟಿಸಲಾಗುತ್ತಿದೆ. ಗ್ಲೋಬಲ್ ಮಾರುಕಟ್ಟೆಗೆ 'ಕೃಷಿ ರಫ್ತು ಅಭಿಯಾನ'ಕೆಪೆಕ್ **ಸಂಸ್ಥೆಯ ಬಲವರ್ಧನೆ** : ಕೃಷಿ ಹಾಗೂ ತೋಟಗಾರಿಕೆ ಉತ್ಪನ್ನಗಳ ರಫ್ತಿಗೆ ಹೊಸ ವೇಗ ನೀಡಲು 'ಕೆಪೆಕ್' ಸಂಸ್ಥೆಯನ್ನು ಆರ್ಥಿಕವಾಗಿ ಹಾಗೂ ರಚನಾತ್ಮಕವಾಗಿ ಸಜ್ಜುಗೊಳಿಸಲಾಗುತ್ತಿದೆ.

ವಿಶೇಷ ಉತ್ಪನ್ನಗಳ ರಫ್ತು: ರಾಜ್ಯದ ಮಾವು, ದಾಳಿಂಬೆ, ರಾಗಿ, ಸಿರಿಧಾನ್ಯಗಳು, ಅಕ್ಕಿ ಹಾಗೂ ತೊಗರಿ ಬೇಳೆಗೆ ಗ್ರೇಡಿಂಗ್ ಮತ್ತು ಬ್ರಾಂಡಿಂಗ್ ಸೌಲಭ್ಯ ನೀಡಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಬೆಲೆ ದೊರಕಿಸಲಾಗುತ್ತಿದೆ.

ಪಿಎಂ ಕುಸುಮ್ ಸೌರಶಕ್ತಿಯ ಸುವರ್ಣ ಸ್ಪರ್ಶ ದಕ್ಷಿಣ ಭಾರತದಲ್ಲೇ ಪ್ರಥಮ : ರಾಜ್ಯದಲ್ಲಿ 1,80,003 ಕ್ಕೂ ಹೆಚ್ಚು ರೈತರ ಪಂಪ್‌ಸೆಟ್‌ಗಳನ್ನು ಸೌರ ವಿದ್ಯುದೀಕರಣಗೊಳಿಸುವ ಮೂಲಕ ಕರ್ನಾಟಕವು ದಕ್ಷಿಣ ಭಾರತದಲ್ಲೇ ಪ್ರಥಮ ಹಾಗೂ ದೇಶದಲ್ಲೇ 5ನೇ ಸ್ಥಾನ ಪಡೆದುಕೊಂಡಿದೆ.

ಉಚಿತ ನೀರಾವರಿ ಸೌಲಭ್ಯ : ರೈತರ ವಿದ್ಯುತ್ ವೆಚ್ಚವನ್ನು ಸಂಪೂರ್ಣ ಕಡಿಮೆ ಮಾಡಿ ನೀರಾವರಿಯನ್ನು ಅತ್ಯಂತ ಲಾಭದಾಯಕವಾಗಿಸಲಾಗಿದೆ.

ತೇಗದ ಸಿರಿ : ದೀರ್ಘಕಾಲೀನ ಆರ್ಥಿಕ ಭದ್ರತೆ ನೀಡುವ ಮರಗಳ ಬೆಳೆಸುವಿಕೆಯನ್ನು ಪ್ರೋತ್ಸಾಹಿಸಲು 'ತೇಗದ ಸಿರಿ' ಯೋಜನೆಯನ್ನು ರೂಪಿಸಲಾಗಿದೆ. ರೈತರು ತಮ್ಮ ಜಮೀನಿನ ರಸ್ತೆಯ ಅಕ್ಕ ಪಕ್ಕ ಅಥವಾ ಖಾಲಿ ಜಾಗಗಳಲ್ಲಿ ತೇಗದಂತಹ ಬೆಲೆಬಾಳುವ ಮರಗಳನ್ನು ಬೆಳೆಸುವ ಮೂಲಕ ಭವಿಷ್ಯದಲ್ಲಿ ಉತ್ತಮ ಆರ್ಥಿಕ ಲಾಭ ಪಡೆಯಬಹುದು. ಇದು ರೈತರ ಆದಾಯ ಹೆಚ್ಚಿಸುವುದಷ್ಟೇ ಅಲ್ಲದೆ, ಪರಿಸರ ಸಮತೋಲನ ಮತ್ತು ಅರಣ್ಯೀಕರಣಕ್ಕೂ ಬೆಂಬಲ ನೀಡುತ್ತದೆ. ರೈತರು ಬೆಳೆಯುವ ಇಂತಹ ತೇಗದ ಮರಗಳಿಗೆ ಶೇಕಡ 70ರಷ್ಟು ರೈತರು ಹಾಗೂ ಶೇಕಡ 30 ರಷ್ಟು ಸರ್ಕಾರ ಬಳಸಿಕೊಳ್ಳಲಿದೆ. ಇದರಿಂದ ರೈತರ ಆರ್ಥಿಕತೆ ಸುಧಾರಿಸುವಲ್ಲಿ ಎರಡು ಮಾತಿಲ್ಲ.

ಮುಖ್ಯಮಂತ್ರಿಗಳ ಆಶಯ

"ಭೂಮಿ, ನೀರು, ಆಧುನಿಕ ತಂತ್ರಜ್ಞಾನ ಹಾಗೂ ನೇರ ಮಾರುಕಟ್ಟೆ ಸಂಪರ್ಕಗಳ ಸಮನ್ವಯದೊಂದಿಗೆ ಪ್ರತಿಯೊಬ್ಬ ರೈತನ ಶ್ರಮಕ್ಕೆ ತಕ್ಕ ಮೌಲ್ಯ ದೊರೆಯಬೇಕು. 'ದೃಢ ಕರ್ನಾಟಕ' ಸಂಕಲ್ಪವು ಬರಿ ಆಡಳಿತದ ಮೈಲಿಗಲ್ಲಷ್ಟೇ ಅಲ್ಲ, ಅದು ಪ್ರತಿಯೊಬ್ಬ ಅನ್ನದಾತನ ಬದುಕಿನಲ್ಲಿ ಹೊಸ ಭರವಸೆ ತರುವ ಸುವರ್ಣ ದಾರಿದೀಪ'ವಾಗಿ ರೈತರ ಬಾಳು ಉಜ್ವಲವಾಗಬೇಕು.

ಸರ್ಕಾರದ ಈ ಎಲ್ಲಾ ನೀತಿ ಮತ್ತು ಮಿಷನ್‌ಗಳು ಕೇವಲ ಯೋಜನೆಗಳಾಗಿ ಉಳಿಯದೆ, ಗ್ರಾಮೀಣ ಕರ್ನಾಟಕದ ಬದುಕನ್ನು ಧನಾತ್ಮಕವಾಗಿ ಬದಲಾಯಿಸುವ ಮಹತ್ವದ

ದಸರಾ ಕಾರ್ಯಕ್ರಮದ ಸಿದ್ಧತೆ ಪರಿಶೀಲಿಸಿದ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು; ಜಿಲ್ಲೆಯಲ್ಲಿ ನಡೆಯಲಿರುವ ದಸರಾ ಮಹೋತ್ಸವದ ಅಂಗವಾಗಿ ಆಯೋಜಿಸಲಾಗುತ್ತಿರುವ ವಿವಿಧ ಕಾರ್ಯಕ್ರಮಗಳ ಸಿದ್ಧತೆಗಳನ್ನು ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಜಿ. ಪರಮೇಶ್ವರ ಅವರು ಮಹಾತ್ಮ ಗಾಂಧಿ ಕ್ರೀಡಾಂಗಣಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾಗಿರುವ ಪಂಜಿನ ಕವಾಯತು ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಹಾಗೂ ಯಶಸ್ವಿಯಾಗಿ ಆಯೋಜಿಸುವ ನಿಟ್ಟಿನಲ್ಲಿ ಕೈಗೊಳ್ಳಲಾಗಿರುವ ಸಿದ್ಧತೆಗಳ ಕುರಿತು ಅವರು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ದಸರಾ ಮಹೋತ್ಸವಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಆಗಮಿಸುವ ನಿರೀಕ್ಷೆಯಿರುವ ಹಿನ್ನೆಲೆಯಲ್ಲಿ ಕ್ರೀಡಾಂಗಣದಲ್ಲಿ ಅಗತ್ಯ ವ್ಯವಸ್ಥೆಗಳನ್ನು ಸಮರ್ಪಕವಾಗಿ ಕಲ್ಪಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ದಸರಾ ಮಹೋತ್ಸವದ ಎಲ್ಲಾ ಕಾರ್ಯಕ್ರಮಗಳು ಶಿಸ್ತುಬದ್ಧವಾಗಿ ನಡೆಯುವಂತೆ ವಿವಿಧ ಇಲಾಖೆಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಸಾರ್ವಜನಿಕರು ಹಾಗೂ ಪ್ರವಾಸಿಗರಿಗೆ ಉತ್ತಮ ಅನುಭವ ನೀಡುವ ರೀತಿಯಲ್ಲಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವಂತೆ ಡಾ. ಜಿ. ಪರಮೇಶ್ವರ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬೀದಿ ಬದಿ ವ್ಯಾಪಾರಿಗಳಿಗೆ ಪರ್ಯಾಯ ವ್ಯಾಪಾರ ವಲಯ ಘೋಷಣೆ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಸರ್ವೋಚ್ಛ ನ್ಯಾಯಾಲಯದ ಆದೇಶದ ಅನುಷ್ಠಾನಕ್ಕಾಗಿ ಪಾಲಿಕೆ ವ್ಯಾಪ್ತಿಯಲ್ಲಿ ಪ್ರಮುಖ ರಸ್ತೆ ಬದಿಗಳಲ್ಲಿ ವ್ಯಾಪಾರ ಮಾಡುತ್ತಿದ್ದ ಬೀದಿ ಬದಿ ವ್ಯಾಪಾರಿಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಸಭೆ ನಡೆಸಿ ಕೈಗೊಂಡ ನಿರ್ಣಯದಂತೆ ಬೀದಿ ಬದಿ ವ್ಯಾಪಾರಿಗಳನ್ನು ಘೋಷಿತ ವ್ಯಾಪಾರ ವಲಯಕ್ಕೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಪಾಲಿಕೆ ಆಯುಕ್ತೆ ಶುಭ ತಿಳಿಸಿದ್ದಾರೆ.

ತಾತ್ಕಾಲಿಕ ಪಟ್ಟಣ ಮಾರಾಟ ಸಮಿತಿಯ ಸದಸ್ಯರನ್ನೊಳಗೊಂಡಂತೆ ಬೀದಿ ಬದಿ ವ್ಯಾಪಾರಸ್ಥರ ಸಂಘ ಸಂಸ್ಥೆಗಳ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿ ವ್ಯಾಪಾರವಲಯವೆಂದು ಘೋಷಿಸಿರುವ ಪ್ರದೇಶಕ್ಕೆ ಬೀದಿ ಬದಿ ವ್ಯಾಪಾರಿಗಳನ್ನು ಸ್ಥಳಾಂತರಿಸುವ ನಿರ್ಣಯವನ್ನು ಕೈಗೊಳ್ಳಲಾಗಿದೆ. ಪಾಲಿಕೆ ವ್ಯಾಪ್ತಿಯಲ್ಲಿ ನೋಂದಾಯಿತ ಬೀದಿ ಬದಿ ವ್ಯಾಪಾರಸ್ಥರು ಘೋಷಿತ ವ್ಯಾಪಾರ ವಲಯಗಳಲ್ಲಿ ವಹಿವಾಟು ನಡೆಸಲು ಪರ್ಯಾಯ ವ್ಯವಸ್ಥೆ ಮಾಡಿಕೊಡಲಾಗಿದೆ.



ಪಾದಚಾರಿ ಮಾರ್ಗಗಳ ಒತ್ತುವರಿ ತೆರವು, ನಿಯಮಿತ ನಿರ್ವಹಣೆ, ಸ್ವಚ್ಛತೆ ಹಾಗು ಸುರಕ್ಷತೆ, ಸಾರ್ವಜನಿಕ ಸಂಚಾರಕ್ಕೆ ಯಾವುದೇ ಅಡೆ-ತಡೆ ಇಲ್ಲದಂತೆ ಅವಕಾಶ ಮಾಡಿಕೊಡಲು ಬೀದಿ ಬದಿ ವ್ಯಾಪಾರಸ್ಥರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದೆ. ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಕಾರ್ಯಾಚರಣೆಯಿಂದ ಸಾರ್ವಜನಿಕರಿಗೆ ವಿಶೇಷವಾಗಿ ಹಿರಿಯ ನಾಗರಿಕರು, ಮಹಿಳೆಯರು, ವಿಶೇಷ ಚೇತನರು, ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಮುಕ್ತ ಹಾಗೂ ಸುರಕ್ಷಿತ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದು, ಈ ಕಾರ್ಯಾಚರಣೆ ಕುರಿತಂತೆ ಸಾರ್ವಜನಿಕವಾಗಿ ಪ್ರಶಂಸೆ ವ್ಯಕ್ತವಾಗಿದೆ.

ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ ಅಧಿನಿಯಮ 2014ರನ್ವಯ ಸಾರ್ವಜನಿಕ ಸ್ಥಳ/ಸರ್ಕಾರಿ ಕಚೇರಿ/ಬಸ್-ರೈಲು ನಿಲ್ದಾಣ, ಆಸ್ಪತ್ರೆ ಆವರಣದಿಂದ 100 ಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಮಾರಾಟ ವಲಯವೆಂದು ಘೋಷಿಸಲು ಇರುವ ನಿಷೇಧ, ತೆರವುಗೊಳಿಸಲು ನೈರುತ್ಯ ರೈಲ್ವೆ ಉಪ ಮುಖ್ಯ ಅಭಿಯಂತರರ ಮನವಿ, ರೈಲ್ವೆ ಇಲಾಖೆ ಕಾಮಗಾರಿ ಪ್ರಗತಿಯಲ್ಲಿರುವ, ಪ್ರವಾಸಿ ಮಂದಿರಕ್ಕೆ ನಿಯಮಿತವಾಗಿ ಗಣ್ಯವ್ಯಕ್ತಿಗಳು ಭೇಟಿ ನೀಡುವ ಕಾರಣಗಳಿಂದ ಬೀದಿ ಬದಿ ವ್ಯಾಪಾರದಿಂದ ಸಂಚಾರ ದಟ್ಟಣೆ ಉಂಟಾಗುವ ಹಿನ್ನೆಲೆಯಲ್ಲಿ ನಗರದ ಪ್ರವಾಸಿ ಮಂದಿರದ ಮುಂಭಾಗ ಹಾಗೂ ರೈಲ್ವೆ ನಿಲ್ದಾಣದ ರಸ್ತೆಗಳ ಪಾದಚಾರಿ ಮಾರ್ಗಗಳಲ್ಲಿದ್ದ ಬೀದಿ ಬದಿ ವ್ಯಾಪಾರಿಗಳನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗಿದೆ.

ಪಾಲಿಕೆ ವ್ಯಾಪ್ತಿಯಲ್ಲಿ ಘೋಷಿಸಿರುವ ಎಲ್ಲಾ ಮಾರಾಟ ವಲಯಗಳಲ್ಲಿ ವ್ಯಾಪಾರ ಮಾಡುತ್ತಿರುವ ಬೀದಿ ಬದಿ ವ್ಯಾಪಾರಸ್ಥರಿಗೆ ಗುರುತಿನ ಚೀಟಿ ನೀಡುವುದು ಸೇರಿದಂತೆ ವ್ಯಾಪಾರ ವಲಯಗಳಲ್ಲಿ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ತುರ್ತಾಗಿ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಬೀದಿ ಬದಿ ವ್ಯಾಪಾರಸ್ಥರನ್ನು ಸಾಮಾಜಿಕ ಹಾಗೂ ಆರ್ಥಿಕವಾಗಿ ಸದೃಢಗೊಳಿಸಲು ಕಾಯ್ದೆಯಡಿ ಕೈಗೊಳ್ಳಬೇಕಾದ ಎಲ್ಲಾ ಕ್ರಮಗಳನ್ನು ಪಾಲಿಕೆ ಕೈಗೊಳ್ಳಲು ಬದ್ಧವಾಗಿದೆ.

ಪರ್ಯಾಯ ವ್ಯವಸ್ಥೆ :-

ಬೀದಿ ಬದಿ ವ್ಯಾಪಾರಿಗಳಿಗೆ ಪ್ರಸ್ತುತ ವ್ಯಾಪಾರ ನಡೆಸುತ್ತಿರುವ ಪ್ರದೇಶದಿಂದ ವ್ಯಾಪಾರ ವಲಯವೆಂದು ಘೋಷಿಸಿರುವ ಪ್ರದೇಶದಲ್ಲಿ ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದೆ ಅಂತರಸನಹಳ್ಳಿ ಎಪಿಎಂಸಿ ಮಾರುಕಟ್ಟೆ ಸುತ್ತಮುತ್ತಲಿನ ಪ್ರದೇಶದಿಂದ ಅಂತರಸನಹಳ್ಳಿ ಎಪಿಎಂಸಿ ವ್ಯಾರುಕಟ್ಟೆ ಕೆ.ಎಸ್.ಆರ್.ಟಿ.ಸಿ. ವಿಭಾಗೀಯ ನಿಯಂತ್ರಣಾಧಿಕಾರಿಗಳ ಕಚೇರಿ ಮುಂಭಾಗ; ಕುಣಿಗಲ್ ರಸ್ತೆಯ ಎರಡೂ ಬದಿಯ ಪ್ರದೇಶದಿಂದ ಕುಣಿಗಲ್ ರಸ್ತೆ ಕರ್ನಾಟಕ ಬ್ಯಾಂಕ್ ಪ್ರಾದೇಶಿಕ ಕಚೇರಿ ಮುಂಭಾಗದ ರಸ್ತೆಯ ಎಡಭಾಗ; ಕಾಲ್ಟೆಕ್ಸ್ ಸರ್ಕಲ್(ಲಕ್ಕಪ್ಪ ವೃತ್ತ) ಜೆ.ಸಿ.ರಸ್ತೆಯ ಪ್ರದೇಶದಿಂದ ಜೆ.ಸಿ.ರಸ್ತೆ ವಹಾರಿಯಮ್ಮ ನಗರದ ಮಾರಾಟ ವಲಯ; ಅಶೋಕ ರಸ್ತೆಯ ಎರಡೂ ಬದಿಯ ಪ್ರದೇಶದಿಂದ ಖಾಸಗೀ ಬಸ್ ನಿಲ್ದಾಣದ ಬಳಿ ಇರುವ ಮಾರಾಟ ವಲಯ; ಎಂ.ಜಿ.ರಸ್ತೆ ಹಾಗೂ ವಿವೇಕಾನಂದ ರಸ್ತೆಯ ಪ್ರದೇಶದಿಂದ ಗುಬ್ಬಿ ವೀರಣ್ಣ ಕಲಾಕ್ಷೇತ್ರದ ಮುಂಭಾಗ(ಹಳೇ ಕೆ.ಎಸ್.ಆರ್.ಟಿ.ಸಿ. ಡಿಪೋ ಹಿಂಭಾಗ); ಬಿ.ಹೆಚ್.ರಸ್ತೆ, ಹೈಸ್ಕೂಲ್ ವೈದಾನದ ಮುಂಭಾಗದಿಂದ ಡಿಡಿಪಿಐ ಕಚೇರಿ ಬಳಿ ಮೇಲ್ಸೆತುವೆ ಕೆಳಭಾಗದಲ್ಲಿನ ಮಾರಾಟ ವಲಯ; ರೈಲ್ವೆ ನಿಲ್ದಾಣ ಹಾಗೂ ಪ್ರವಾಸಿ ಮಂದಿರದ ಸುತ್ತ ಮುತ್ತಲಿನ ಪ್ರದೇಶದಿಂದ ಉಪ್ಪಾರಹಳ್ಳಿ ಅಂಡರ್‌ಪಾಸ್ ಕೆಳಭಾಗದಲ್ಲಿ ಸ್ಮಾರ್ಟ್ ಸಿಟಿಯಿಂದ ಅಭಿವೃದ್ಧಿಪಡಿಸಿರುವ ಮಾರಾಟ ವಲಯ; ಎಸ್.ಎಸ್.ವೃತ್ತದಿಂದ ಬಟವಾಡಿವರೆಗಿನ ಎರಡೂ ಬದಿಯ ಪ್ರದೇಶದಿಂದ ದೋಬಿ ಘಾಟ್ ಮಾರಾಟ ವಲಯ; ಶೆಟ್ಟಿಹಳ್ಳಿ ರಸ್ತೆಯಿಂದ ಎಸ್‌ಎಸ್ ಪುರಂವರೆಗಿನ ಎರಡೂ ಬದಿಯ ಪ್ರದೇಶದಿಂದ ಜಯನಗರ ಮಾರಾಟ ವಲಯ ಹಾಗೂ ಕೋತಿ ತೋಪು ರಸ್ತೆ ಬದಿಯ ಪ್ರದೇಶದಿಂದ ಎಸ್.ಎಸ್.ವೃತ್ತದ ಬಳಿ ಇರುವ ಫುಡ್ ಸ್ಟ್ರೀಟ್‌ನ ಉಳಿಕೆ ಜಾಗಕ್ಕೆ ವ್ಯಾಪಾರಸ್ಥರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಿ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ಸಿನಿ ತಾರೆಯರ ಗಣೇಶೋತ್ಸವ

ಸೂರ್ಯಪ್ರಗತಿನ್ಯೂಸ್.ಕಾಂ

ರಶ್ಮಿಕಾ ಮಂದಣ್ಣ ತಮ್ಮ ಮನೆಯಲ್ಲಿ ಗಣೇಶ ಮೂರ್ತಿಯನ್ನು ಕೈಯಲ್ಲಿ ಹಿಡಿದು, ತಮ್ಮ ಮುದ್ದಾದ ಸಾಕು ನಾಯಿಯೊಂದಿಗೆ ನಗು ಮೊಗದಿಂದ ಗಣೇಶ ಚತುರ್ಥಿಯ ಶುಭಾಶಯ ತಿಳಿಸಿದ್ದಾರೆ.



ನಟ ಧನಂಜಯ್ ತಮ್ಮ ಕುಟುಂಬದೊಂದಿಗೆ ಸಂಪ್ರದಾಯಿಕ ಉಡುಪಿನಲ್ಲಿ ಗಣೇಶ ಚತುರ್ಥಿ ಆಚರಿಸಿದ್ದಾರೆ.

ಹೂವಿನ ಅಲಂಕಾರದ ನಡುವೆ ಮಗುವನ್ನು ಎತ್ತಿಕೊಂಡು ಸಂಭ್ರಮದ ಕ್ಷಣ ಹಂಚಿಕೊಂಡಿದ್ದಾರೆ.

ಸಂಪ್ರದಾಯಿಕ ಬಿಳಿ ಉಡುಪಿನಲ್ಲಿ ದೀಪ ಹಾಗೂ ಅದ್ದೂರಿ ಹಿನ್ನೆಲೆಯಲ್ಲಿ ಚಿನ್ನದ ಬಣ್ಣದ ಗಣಪತಿ ವಿಗ್ರಹದ ಮುಂದೆ ಕುಳಿತು ಹನ್ಸಿಕಾ ಸಂಭ್ರಮಿಸಿದ್ದಾರೆ.



ಪ್ರತಿವರ್ಷದಂತೆ ಈ ಬಾರಿಯೂ ಶಿಲ್ಪಾ ಶೆಟ್ಟಿ ತಮ್ಮ ಮನೆಯಲ್ಲಿ ಗಣೇಶನನ್ನು ಪ್ರತಿಷ್ಠಾಪಿಸಿ, ದೀಪ ಬೆಳಗಿ, ಕಿರೀಟವಿಟ್ಟ ಸುಂದರ ಗಣಪತಿಗೆ ಭಕ್ತಿಯಿಂದ ತಿಲಕವಿಟ್ಟು ಪೂಜೆ ಸಲ್ಲಿಸಿದ್ದಾರೆ.

ಹಸಿರು ಸೀರೆಯಲ್ಲಿ ಕಳೆಗಟ್ಟಿರುವ ಐಶಾನಿ ಶೆಟ್ಟಿ, ಹೂವುಗಳಿಂದ ಅಲಂಕರಿಸಲ್ಪಟ್ಟ ಮುದ್ದಾದ ಗಣೇಶ ಮೂರ್ತಿ ಹಾಗೂ ಹಣತೆಯ ಮುಂದೆ ಕುಳಿತು ಸರಳವಾಗಿ ಹಬ್ಬವನ್ನು ಆಚರಿಸಿದ್ದಾರೆ.

ಗುಲಾಬಿ ಉಡುಪಿನಲ್ಲಿ ಕಂಗೊಳಿಸುತ್ತಿರುವ ನಮ್ರತಾ



ಶಿರೋಡ್ಕರ್ ತಮ್ಮ ಪೂಜಾ ಕೋಣೆಯಲ್ಲಿ ಗಣೇಶ ಮೂರ್ತಿ ಹಾಗೂ ತಮ್ಮ ಸಾಕುನಾಯಿಗಳೊಂದಿಗೆ ಸರಳವಾಗಿ ಹಬ್ಬ ಆಚರಿಸಿದ್ದಾರೆ.



ಗುಲಾಬಿ-ಕಿತ್ತಳೆ ಬಣ್ಣದ ಸೀರೆಯಲ್ಲಿ ದೇವತೆಯಂತೆ ಕಂಗೊಳಿಸುತ್ತಿರುವ ವೈಷ್ಣವಿ ಗೌಡ, ಗೌರಿ-ಗಣೇಶ ವಿಗ್ರಹಗಳ ಮುಂದೆ ಕೈಮುಗಿದು ನಮಸ್ಕರಿಸುತ್ತಾ ಹಬ್ಬದ ಸಂಭ್ರಮ ಹಂಚಿಕೊಂಡಿದ್ದಾರೆ.

ನಟ ಕಿರಣ್ ರಾಜ್ ಸಂಪ್ರದಾಯಿಕ ಪಂಚೆ ತೊಟ್ಟು, ತಮ್ಮ ವಾಹನದ ಮುಂದೆ ಗಣೇಶ ಮೂರ್ತಿಯನ್ನು ಪವಿತ್ರ ವಸ್ತ್ರದಲ್ಲಿ ಹಿಡಿದು ಮನೆಗೆ ತರುತ್ತಿರುವ ಸುಂದರ ಕ್ಷಣ ಇಲ್ಲಿದೆ.



ಹಳದಿ ಬಣ್ಣದ ಸುಂದರ ಉಡುಪಿನಲ್ಲಿ ಮಿಂಚುತ್ತಿರುವ ತನಿಷಾ ಕುಪ್ಪಂಡ, ಹೂವು ಹಾಗೂ ಹಣ್ಣುಗಳಿಂದ ಅಲಂಕೃತಗೊಂಡ ಬೃಹತ್ ಗಣೇಶ ಮೂರ್ತಿಯ ಮುಂದೆ ನಿಂತು ಹಬ್ಬದ ಶುಭಾಶಯ ಕೋರಿದ್ದಾರೆ.

ಅಕ್ರಮ ಮತ್ತು ಹಗರಣಗಳಿಂದಲೇ ಸುದ್ದಿಯಾಗುವ KPSC ಸಂಸ್ಥೆಯನ್ನ ರದ್ದು ಮಾಡಬೇಕು

ಸೂರ್ಯಪ್ರಗತಿನ್ಯೂಸ್.ಕಾಂ

ಬೆಂಗಳೂರು: ಯಾವಾಗಲೂ ಅಕ್ರಮ ಮತ್ತು ಹಗರಣಗಳಿಂದಲೇ ಸುದ್ದಿಯಾಗುವ KPSC ಯನ್ನ ರದ್ದು ಮಾಡಬೇಕು ಎಂದು ಅವಗಾವಾಗ ಸದ್ದು ಕೇಳಿಬರುತ್ತಲೇ ಇರುತ್ತದೆ. ಅದಕ್ಕೆ ಈಗ ಸಚಿವ ಈಶ್ವರ ಖಂಡ್ರೆ ಕೂಡ ತಮ್ಮ ಧ್ವನಿ ಸೇರಿಸಿದ್ದು, ಕರ್ನಾಟಕ ಲೋಕಸೇವಾ ಆಯೋಗದ ಮೇಲೆ ನಿರಂತರವಾಗಿ ಕೇಳಿಬರುತ್ತಿರುವ ಭ್ರಷ್ಟಾಚಾರ ಮತ್ತು ಹಗರಣಗಳ ಹಿನ್ನೆಲೆಯಲ್ಲಿ, ಆಯೋಗವನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕು ಎಂದು ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದಾರೆ. ಆ ಕುರಿತ ವರದಿ ಇಲ್ಲಿದೆ:

ಕೆಪಿಎಸ್‌ಸಿ ಪರೀಕ್ಷೆಗಳಲ್ಲಿ ಪಾರದರ್ಶಕತೆ ಕೊರತೆ!

ಕರ್ನಾಟಕ ಲೋಕಸೇವಾ ಆಯೋಗವನ್ನು ರದ್ದುಪಡಿಸುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ ಅವರು, "ಕೆಪಿಎಸ್‌ಸಿ ಸಂಸ್ಥೆಯ ಮೇಲೆ 1998 ರಿಂದಲೂ ನಿರಂತರವಾಗಿ ಭ್ರಷ್ಟಾಚಾರ, ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ನೇಮಕಾತಿ ಪ್ರಕ್ರಿಯೆಯಲ್ಲಿ ಭಾರಿ ಅಕ್ರಮಗಳು ನಡೆದಿರುವ ಗುರುತರ ಆರೋಪಗಳು ಕೇಳಿಬರುತ್ತಿವೆ. ಇತ್ತೀಚೆಗೆ ನಡೆದಿರುವ ಪಶುವೈದ್ಯರ ನೇಮಕಾತಿ ಹಗರಣದ ತನಿಖೆ ತೀವ್ರಗೊಳ್ಳುತ್ತಿರುವ ಬೆನ್ನಲ್ಲೇ, ಈ ಸ್ವಾಯತ್ತ ಸಂಸ್ಥೆಯು ತನ್ನ ಪಾರದರ್ಶಕತೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿದೆ" ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಜೊತೆಗೆ, ಕೆಪಿಎಸ್‌ಸಿ ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು, ವಿವಿಧ ಸರ್ಕಾರಿ ಇಲಾಖೆಗಳ ನೇಮಕಾತಿಯನ್ನು ಪಾರದರ್ಶಕವಾಗಿ ನಡೆಸುವುದು ಅದರ ಜವಾಬ್ದಾರಿಯಾಗಿದೆ. ಆದರೆ ಆಯೋಗವು ಈ ನಿಟ್ಟಿನಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ತಿಳಿಸಿದ್ದಾರೆ.

ರದ್ದತಿಗೆ ಒತ್ತಾಯಿಸಲು ಪ್ರಮುಖ ಕಾರಣ:

ಕೆಪಿಎಸ್‌ಸಿ ಸಂಸ್ಥೆಯ ಮೇಲೆ 1998 ರಿಂದಲೂ ನಿರಂತರವಾಗಿ ಭ್ರಷ್ಟಾಚಾರ, ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ನೇಮಕಾತಿ ಪ್ರಕ್ರಿಯೆಯಲ್ಲಿ ಭಾರಿ ಅಕ್ರಮಗಳು ನಡೆದಿರುವ ಗುರುತರ ಆರೋಪಗಳು ಕೇಳಿಬರುತ್ತಿವೆ. ಇತ್ತೀಚೆಗೆ ನಡೆದಿರುವ ಪಶುವೈದ್ಯರ ನೇಮಕಾತಿ ಹಗರಣದ ತನಿಖೆ ತೀವ್ರಗೊಳ್ಳುತ್ತಿರುವ ಬೆನ್ನಲ್ಲೇ, ಈ ಸ್ವಾಯತ್ತ ಸಂಸ್ಥೆಯು ತನ್ನ ಪಾರದರ್ಶಕತೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿದೆ ಎಂದು ಸಚಿವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಹಾಗಾದ್ರೆ, ಪರ್ಯಾಯ ಪ್ರಸ್ತಾವನೆಗಳೇನು?

ಏಕಖಅ ಯನ್ನು ಸಂಪೂರ್ಣವಾಗಿ ರದ್ದುಗೊಳಿಸಿದ ನಂತರ ಮುಂದಿನ ನೇಮಕಾತಿಗಳಿಗಾಗಿ ಸಚಿವ ಈಶ್ವರ ಖಂಡ್ರೆ ಅವರು ಎರಡು ಮುಖ್ಯ ಪರ್ಯಾಯ ಮಾರ್ಗಗಳನ್ನು ಸಿಎಂ ಮುಂದೆ ಇಟ್ಟಿದ್ದಾರೆ:

ಯುಪಿಎಸ್‌ಸಿ ಮಾದರಿ: ಕೇಂದ್ರ ಲೋಕಸೇವಾ ಆಯೋಗದ ಮಾದರಿಯಲ್ಲೇ ಕರ್ನಾಟಕದಲ್ಲೂ ಅತ್ಯಂತ ಕಟ್ಟುನಿಟ್ಟಿನ ಹೊಸ ಪಾರದರ್ಶಕ ವ್ಯವಸ್ಥೆಯನ್ನು



ಪುನಾರಚನೆ ಮಾಡುವುದು. ಕೆಇಎಗೆ ಜವಾಬ್ದಾರಿ: ಈಗಾಗಲೇ ರಾಜ್ಯದಲ್ಲಿ ಹಲವು ಪ್ರಮುಖ ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಇನ್ಮುಂದೆ ಎಲ್ಲಾ ಸರ್ಕಾರಿ ಹುದ್ದೆಗಳ ನೇಮಕಾತಿಯ ಸಂಪೂರ್ಣ ಹೊಣೆಗಾರಿಕೆಯನ್ನು ವಹಿಸಿಕೊಡುವುದು.

ಮುಂದುವರೆದು, ಹಗರಣ ಮುಕ್ತ ಹಾಗೂ ಪಾರದರ್ಶಕವಾದ ಮೌಲ್ಯಮಾಪನ ಮತ್ತು ಸಂದರ್ಶನ ಪ್ರಕ್ರಿಯೆ ಜಾರಿಗೆ ಬಂದರೆ ಮಾತ್ರ ಕಷ್ಟಪಟ್ಟು ಓದುವ ಕರ್ನಾಟಕದ ಗ್ರಾಮೀಣ ಹಾಗೂ ಪ್ರತಿಭಾವಂತ ಅಭ್ಯರ್ಥಿಗಳಿಗೆ ನ್ಯಾಯ ಸಿಗುತ್ತದೆ ಎಂಬುದು ಸರ್ಕಾರದ ಒಮ್ಮತದ ನಿಲುವಾಗಿದೆ ಎಂದು ಸಚಿವರು ಸ್ಪಷ್ಟಪಡಿಸಿದ್ದಾರೆ.

ಮಧುಗಿರಿ-ಕೊರಟಗೆರೆ ತಾಲೂಕುಗಳಿಗೆ ತಲಾ ಒಂದೊಂದು ಟಿಎಂಸಿ ನೀರು

ರೈತರಿಗೆ ಎಕರೆಗೆ 20 ಸಾವಿರ ರೂ ಪರಿಹಾರ ನೀಡಿ



ಸೂರ್ಯಪ್ರಗತಿನ್ಯೂಸ್.ಕಾಂ

ಮಧುಗಿರಿ:-ಹೇಮಾವತಿ ಯೋಜನೆಯಡಿಯಲ್ಲಿ ಮಧುಗಿರಿ ಮತ್ತು ಕೊರಟಗೆರೆ ತಾಲೂಕುಗಳಿಗೆ ತಲಾ ಒಂದೊಂದು ಟಿಎಂಸಿ ನೀರು ಕೊಡಬೇಕೆಂದು ಸರ್ಕಾರವನ್ನು ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜೆ.ಸಿ. ಶಂಕರಪ್ಪ ಒತ್ತಾಯಿಸಿದರು.

ಪಟ್ಟಣದ ನೀರಿಕ್ಷಣಾ ಮಂದಿರದಲ್ಲಿ ಮಧುಗಿರಿ ಶಿರ ಕೊರಟಗೆರೆ ತಾಲೂಕುಗಳ ರೈತ ಸಂಘದ ಪದಾಧಿಕಾರಿಗಳ ಸಭೆ ನಡೆಸಿ ಪತ್ರಿಕಾಗೋಷ್ಠಿ, ಉದ್ದೇಶಿಸಿ ಮಾತನಾಡಿದ ಅವರು, ಬರಗಾಲದ ಹಿನ್ನೆಲೆಯಲ್ಲಿ ಜನತ ವಲಸೆ ಹೋಗುವುದನ್ನು ತಪ್ಪಿಸಲು ವಿಬಿಜಿ ರಾಮ್ ಜಿ ಯೋಜನೆಯಡಿಯಲ್ಲಿ ಗ್ರಾಮೀಣ ಕೆಲಸಗಳನ್ನು ಕೈಗೆತ್ತಿಕೊಂಡು ದುಡಿಯುವ ಕೈಗಳಿಗೆ ಕೆಲಸ ನೀಡಿ ಉದ್ಯೋಗಕ್ಕಾಗಿ ವಲಸೆ ಹೋಗುವುದನ್ನು ತಪ್ಪಿಸಬೇಕು. ಬೆಳೆ ವಿಮೆಯನ್ನು ತುರ್ತಾಗಿ ನೀಡಬೇಕು. ಪ್ರತಿ ರೈತರಿಗೆ ಎಕರೆಗೆ 20 ಸಾವಿರ ರೂ ಪರಿಹಾರ ನೀಡಬೇಕು. ಎಸ್‌ಜಿಆರ್‌ಎಫ್ ಏನ್ ಡಿ ಆರ್ ಎಫ್ ಯೋಜನೆಯನ್ನು ಪರಿಷ್ಕರಣೆ ಮಾಡಬೇಕು ,ತಕ್ಷಣ ಗೋಶಾಲೆಗಳನ್ನು ತೆರೆಯಬೇಕು, ಹಾಲು ಉತ್ಪಾದಕರಿಗೆ ಲೀಟರಿಗೆ ರೂ.40 ನೀಡಬೇಕು ಸರ್ಕಾರ ನೀಡುವ ಐದು ರೂಪಾಯಿ ಪ್ರತಿ ಹಾಲು ಉತ್ಪಾದಕರಿಗೂ ನೀಡಬೇಕು. ಬಿಪಿಎಲ್ ಪಡಿತರದಾರರಿಗೆ ಕೇರಳ ಮಾದರಿಯಲಿ 50% ರಿಯಾಯಿತಿ ದರದಲ್ಲಿ ದಿನಬಳಕೆ ವಸ್ತುಗಳನ್ನು ನೀಡಬೇಕು. ಕೃಷಿ ಪಂಪ್ ಸೆಟ್ಟುಗಳಿಗೆ ನಿರಂತರವಾಗಿ ಏಳು ಗಂಟೆ ವಿದ್ಯುತ್ ನೀಡಬೇಕು. ಕೃಷಿ ಸಾಲ ಮನ್ನಾ ಮಾಡಬೇಕು. ಎತ್ತಿನಹೊಳೆ ಯೋಜನೆ ಅಡಿಯಲ್ಲಿ ಒಂದು ಟಿಎಂಸಿ ನೀರು ನೀಡಬೇಕೆಂದರು.

ರೈತ ಸಂಘದ ಪದಾಧಿಕಾರಿಗಳಾದ ದೊಡ್ಡ ಮಾಳಯ್ಯ,, ನಾಗರಾಜು ,ನರಸಿಂಹಮೂರ್ತಿ, ಶಬೀರ್ ಪಾಷಾ, ನಾಗರತ್ನಮ್ಮ, ರಮೇಶ್, ಕೆಂಚಪ್ಪ, ವೀರಭದ್ರಪ್ಪ, ತಿಮ್ಮಪ್ಪ ,ಮೂಡ್ಲಪ್ಪ, ಶ್ರೀನಿವಾಸ್ ,ತಿಮ್ಮಣ್ಣ ಜೈರಾಮ್ ಮತ್ತಿತರರು

ಕುಣಿಗಲ್ ತಾ. ಬರ ಪೀಡಿತ ಪ್ರದೇಶ ಘೋಷಣೆಯಾದರು ಕುಡಿಯುವ ನೀರು ದರಕರುಗಳಿಗೆ ಮೇವು ನೀಡುವಲ್ಲಿ ಸರ್ಕಾರ ವಿಫ

ತುಮುಲ್ ನಿಂದ 350 ಕೋಟಿ ವೆಚ್ಚದಲ್ಲಿ ಮೇಘ ಡೈರಿ ಸ್ಥಾಪನೆ

ಸೂರ್ಯಪ್ರಗತಿನ್ಯೂಸ್.ಕಾಂ



ಕುಣಿಗಲ್ ತಾಲೂಕು ಬರ ಪೀಡಿತ ಪ್ರದೇಶ ಘೋಷಣೆಯಾದರು ರೈತರಿಗೆ ಜನಜಾನುವಾರುಗಳಿಗೆ ಸಮರ್ಪಕವಾಗಿ ಕುಡಿಯುವ ನೀರು ದರಕರುಗಳಿಗೆ ಮೇವು ನೀಡುವಲ್ಲಿ ಸರ್ಕಾರ ವಿಫಲಗೊಂಡಿದೆ ಎಂದು ಬಿಜೆಪಿ ಮುಖಂಡ ತುಮಕೂರು ಸಹಕಾರಿ ಹಾಲು ಒಕ್ಕೂಟದ ನಿರ್ದೇಶಕರಾದ ಡಿ ಕೃಷ್ಣಕುಮಾರ್ ಆರೋಪಿಸಿದರು

ಅವರು ತಾಲೂಕಿನ ಮುತಗದಹಳ್ಳಿ ಬಿಳಿ ದೇವಾಲಯ ಸಮೀಪ ಶ್ರೀ ರಂಗಶ್ರೀ ಸಮುದಾಯ ಭವನದಲ್ಲಿ ತುಮಕೂರು ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ಹಾಗೂ ಕುಣಿಗಲ್ ತಾಲೂಕಿನ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಧ್ಯಕ್ಷರು ಕಾರ್ಯದರ್ಶಿಗಳ ಪ್ರಾದೇಶಿಕ ಸಭೆ 20 25 /26ನೇ ಸಾಲಿನ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತ ತುಮಕೂರು ಸಹಕಾರಿ ಹಾಲು ಒಕ್ಕೂಟವು ಎತ್ತರಕ್ಕೆ ಬೆಳೆಯುವುದರೊಂದಿಗೆ 350 ಕೋಟಿ ವೆಚ್ಚದಲ್ಲಿ ಮೇಘ ಡೈರಿ ಸ್ಥಾಪಿಸುತ್ತಿದ್ದು ಈಗಾಗಲೇ 80ರಷ್ಟು ಕಾಮಗಾರಿ ಪೂರ್ಣಗೊಂಡಿದೆ ಇದರ ಜೊತೆಯಲ್ಲಿ 28 ಕೋಟಿ ವೆಚ್ಚದಲ್ಲಿ 400 ಹಾಲು ಒಕ್ಕೂಟದ ರೈತರ ಮಕ್ಕಳ ವಿದ್ಯಾಭ್ಯಾಸಕ್ಕೆ ನೂತನ ವಿದ್ಯಾರ್ಥಿ ನಿಲಯ ಕಟ್ಟಡ ಆರಂಭಗೊಳ್ಳಲಿದ್ದು ಆಧುನಿಕ ತಂತ್ರಜ್ಞಾನ ವುಳ್ಳ ಅಂಕಿ ಅಂಶಗಳ 10 ಕೋಟಿ ವೆಚ್ಚದಲ್ಲಿ ಜಾರಿ ಬರುತ್ತಿದ್ದೋ ತುಮಕೂರು ಸಹಕಾರಿ ಹಾಲು ಒಕ್ಕೂಟದ ಚಿತ್ರಣವೇ ಬದಲಾವಣೆ ಹೊಂದಲಿದೆ ಜಿಲ್ಲೆಯಲ್ಲಿ ತಾಲೂಕು ಹಾಲು ಉತ್ಪಾದಕರ ಶೇಖರಣೆಯಲ್ಲಿ ಪ್ರಥಮ ಸ್ಥಾನದಲ್ಲಿದ್ದು 2,5 ಲಕ್ಷ ಹಾಲು ಶೇಖರಣೆ ಗುರಿಯಾಗಿದೆ ಈಗಾಗಲೇ ತಾಲೂಕಿನ ಎಲ್ಲಾ ಕಟ್ಟಡಗಳ ಆರ್ಥಿಕ ಸಹಾಯ ಸಹಕಾರ ನೀಡುತ್ತಿದ್ದು ಹಾಲು ಉತ್ಪಾದಕರು ಕಲಬೆರಿಕೆ ರಹಿತವಾದ ಗುಣಮಟ್ಟದ ಹಾಲು ಪೂರೈಕೆಯನ್ನು ಮಾಡಬೇಕಾಗಿದೆ ರಾಜ್ಯ ಸರ್ಕಾರವು ರಾಗಿ ಖರೀದಿಸಿ ಇಲ್ಲಿಯವರೆಗೂ ರಾಗಿ ಹಣ ನೀಡಿರುವುದಿಲ್ಲ ಎಂದು ದೂರುತ ಯಾವುದೇ ಒಕ್ಕೂಟದ ಸದಸ್ಯನಾದರೆ ನೂರು ವರ್ಷವಾದರೂ ಸಹ ಆ ವ್ಯಕ್ತಿಗೆ ಎಲ್ಲಾ ರೀತಿಯ ಸೌಲಭ್ಯಗಳು ದೊರೆಯುತ್ತವೆ ಹೆಣ್ಣು ಮಕ್ಕಳು ಹೆಚ್ಚು ಹೆಚ್ಚು ಈ ಹಾಲು ಒಕ್ಕೂಟದ ಸಹಾಯ ಸೌಲಭ್ಯಗಳನ್ನ ಪಡೆಯುವಂತಾಗಬೇಕು ಹಾಲು ಒಕ್ಕೂಟದ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಡಾಕ್ಟರ್ ಇಂಜಿನಿಯರ್ ಸೇರಿದಂತೆ ಒಕ್ಕೂಟವು ಸಹಾಯ ಹಸ್ತ ನೀಡುತ್ತಿದೆ ಎಂದು ತಿಳಿಸಿದರು ತಾಲೂಕಿನಲ್ಲಿ 285 ರಾಸುಗಳು ನಿಧನ ಹೊಂದಿ ಅವುಗಳಿಗೆ ಒಂದು ಕೋಟಿ ಅರವತ್ತು ಲಕ್ಷ ರೂಪಾಯಿ ವಿಮೆ ನೀಡಲಾಗಿದೆ ರಾಜ್ಯ ಸರ್ಕಾರ ಬರಪೀಡಿತ ಪ್ರದೇಶ ಎಂದು ಘೋಷಣೆ ಮಾಡಿದ್ದರೂ ಸಹ ಯಾವುದೇ ರೀತಿಯ ಕ್ರಮ ಕೈಗೊಳ್ಳದೆ ಜನ ಜಾನುವಾರುಗಳಿಗೆ ನೀರು ಇಲ್ಲದಂತೆ ಪರಿತಪಿಸುತ್ತಿದ್ದಾರೆ ಎಂದು ದೂರಿದರು ಒಕ್ಕೂಟದಿಂದ ಒಂದು ರೂಪಾಯಿ ಹಾಲಿನ ದರ ಹೆಚ್ಚಿಗೆಮಾಡಿದ್ದು ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿಗಳು ಎರಡರಿಂದ ಮೂರು ರೂಪಾಯಿಗೆ ಹೆಚ್ಚಿಸುವ ಸಾಧ್ಯತೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು ಬರಡು ರಾಸುಗಳ ಸಭೆಯನ್ನು ಕರೆಯುವ ವಿಶ್ವಾಸ ವ್ಯಕ್ತಪಡಿಸಿದರು

ಜಿಲ್ಲೆಯಲ್ಲಿ ಹಾಲು ಶೇಖರಣೆ 10 ಲಕ್ಷ 80, ಸಾವಿರ ಶೇಖರಣೆಯಾಗುತ್ತದೆ ಎಲ್ಲಾ ಸೌಲಭ್ಯಗಳನ್ನು ಒಕ್ಕೂಟವು ಒದಗಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ತಿಳಿಸಿದರು

ರೈತ ಮುಖಂಡ ನಿಡಸಾಲೆ ಹಾಲು ಒಕ್ಕೂಟದ ಅಧ್ಯಕ್ಷ ಗಂಗಾಧರ್ ಮಾತನಾಡಿ ಸರ್ಕಾರ ಹಾಲು ಬೆಲೆ ಹೆಚ್ಚಿಸುವಂತಾಗಬೇಕು ಕುಡಿಯುವ ನೀರು ಎಣ್ಣೆ ಏರಿಕೆ ಆಗುತ್ತಿದ್ದು ರೈತರ ಹಾಲು ದರ ಕಡಿಮೆ ಮಾಡುತ್ತಿರುವ ಬಗ್ಗೆ ಎಲ್ಲಾ ಸಹಕಾರ ಸಂಘಗಳ ಅಧ್ಯಕ್ಷರು ಕಾರ್ಯದರ್ಶಿಗಳು ನಿರ್ದೇಶಕರು ಹೋರಾಟ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು ಪಶು ಆಹಾರ ಕಲಬೆರಿಕೆ ಹೆಚ್ಚಾಗಿದ್ದು ರೈತರ ಬದುಕು ಮೂರಾ ಬಟ್ಟೆಯಾಗಿದೆ ರಬ್ಬರ್ ಮ್ಯಾಟ್ ಹಾಗೂ ಬರಡು ರಾಸುಗಳ ಸಭೆ ಕರೆಯುವಂತೆ ಒತ್ತಾಯ ಪಡಿಸಿದರು

ಈ ಸಂದರ್ಭದಲ್ಲಿ ಜಿಲ್ಲಾ ಹಾಲು ಒಕ್ಕೂಟ ನಿರ್ದೇಶಕರಾದ ತುರುವೇಕೆರೆಯ ಸಿವಿ ಮಹಾಲಿಂಗಯ್ಯ. ತಿಪಟೂರಿನ ಎಂ ಕೆ ಪ್ರಕಾಶ್. ಸಿರಾದ ಎಸ್ ಆರ್ ಗೌಡ. ತುಮಕೂರಿನ ಎಚ್ ಎ ನಂಜೇಗೌಡ. ಕೊರಟಗೆರೆಯ ವಿ ಸಿದ್ದಗಂಗಯ್ಯ ಮಾತನಾಡಿದರು

ವ್ಯವಸ್ಥಾಪಕ ನಿರ್ದೇಶಕರಾದ ತಿಮ್ಮನಾಯಕ್. ವ್ಯವಸ್ಥಾಪಕರಾದ ಟಿಪಿ ಶ್ರೀನಿವಾಸ್. ಚಂದ್ರಶೇಖರ್ ಬಿ ಕೇದಾನೂರಿ. ತಿಪ್ಪೇಸ್ವಾಮಿ. ಡಾ. ಸಿದ್ದರಾಮಯ್ಯ ನಿವೃತ್ತ ವಿಜ್ಞಾನಿಗಳು. ಟಿ ಎಸ್ ಕುಮಾರ್.ತಾಲೂಕು ಮುಖ್ಯಸ್ಥರಾದ ನವ್ಯ ಶ್ರೀ ಎಲ್. ಸಹನಾ. ಸುದರ್ಶನ್. ಸೇರಿದಂತೆ ಅನೇಕ ಅಧ್ಯಕ್ಷರು ಕಾರ್ಯದರ್ಶಿಗಳು ರೈತ ಮುಖಂಡರು ಉಪಸ್ಥಿತರಿದ್ದರು

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. GMAIL: suryapragathi2021@gmail.com.